
ಹಿತ್ತಲ ಗಿಡ

ಚಾತುರ್ಮಾಸಿಕ


" ರೈತ, ವಿಜ್ಞಾನಿ, ವಿದ್ಯಾರ್ಥಿ, ಅಧ್ಯಾಪಕ,
ಸ್ವಯಂ ಸೇವಾ ಸಂಸ್ಥೆ ಮತ್ತು ಜನಪರ
ಸಂಘಟನೆಗಳ ಸಾಮೂಹಿಕ ಪ್ರಯತ್ನಕ್ಕೊಂದು ವೇದಿಕೆ "

ಪೈರು 13, ಕೊಯಿಲು 2, ಮೇ – ಆಗಸ್ಟ್ 2007

ಮಲೆನಾಡ ಗಿಡ್ಡ



ಮೇಲೇರುತ್ತಿರುವ ಮಹಿಳೆ



ಈ ಸಂಚಿಕೆಯಲ್ಲಿ

ದೇಶೀಯ ಜಾಣ್ಮೆ 1-2
ಪುಣ್ಯಕೋಟಿ 2
ದೇಶೀಯ ತಂತ್ರಜ್ಞಾನ 3-6
ವ್ಯವಸ್ಥಿತಗೊಳ್ಳುತ್ತಿರುವ ಹಿತ್ತಲಗಿಡ 6
ದೇಶೀಯ ಹತೋಟಿ 7
ಅರಳೀಕಟ್ಟೆ 8
ಆಳಲೆಕಾಯಿ 9
ಜೀವವೈವಿಧ್ಯ 10
ಮಾರುಕಟ್ಟೆ 10
ಶ್ರೀ (Sri) ಪದ್ಧತಿ ನಿಂತ ನೀರಿಲ್ಲದ ಭತ್ತದ ಬೇಸಾಯ 11-12

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವತ್ತ ಕೈಜೋಡಿಸೋಣ

ಸಂಪಾದಕೀಯ

ಕಳೆದ ಏಪ್ರಿಲ್‌ನಲ್ಲಿ ಶಿವಮೊಗ್ಗ ಸಮೀಪದ ರಾಮಚಂದ್ರಾಪುರ ಮಠದಲ್ಲಿ ಅತ್ಯಂತ ಮಹತ್ವದ 'ವಿಶ್ವ ಗೋ ಸಮ್ಮೇಳನ' ಜರುಗಿರುತ್ತದೆ. ದೇಶದಲ್ಲಿ ಉಳಿದಿರುವ ಸುಮಾರು 30 ದೇಶೀಯ ಗೋ ತಳಿಗಳ ಪ್ರದರ್ಶನವನ್ನು ಕೇಂದ್ರವಾಗಿಟ್ಟುಕೊಂಡು, ಈ ತಳಿಗಳನ್ನು ಉಳಿಸಿ, ಬೆಳೆಸುವ ಬಗ್ಗೆ ಸುಮಾರು ಹತ್ತು ದಿನಗಳ ಜಾಗತಿಕ ಮೇಳವೇ ಇಲ್ಲಿ ಏರ್ಪಾಡಾಗಿತ್ತು.

ಪುರಾಣದಲ್ಲೂ ಉಲ್ಲೇಖಿಸಿರುವ, ಹೆಚ್ಚು ಕಡಿಮೆ ಅಳಿವಿನಂಚಿಗೆ ಬಂದಿರುವ ಅತ್ಯಂತ ವಿಶಿಷ್ಠ 'ಕಪಿಲಾ' ತಳಿಯಿಂದ ತೊಡಗಿ ಮಲೆನಾಡಿನಲ್ಲಿ ಮನೆಮನೆಯಲ್ಲೂ ತಳಊರಿರುವ 'ಮಲೆನಾಡ ಗಿಡ್ಡ' ತಳಿಗಳೆಲ್ಲವನ್ನು ಸಾಕಿ, ಸಂರಕ್ಷಿಸುವ ಬಗ್ಗೆ ಗಂಭೀರ ಚರ್ಚೆ ಇಲ್ಲಿ ನಡೆದಿರುತ್ತದೆ. ಜಾನುವಾರು, ಅದರಲ್ಲೂ ಮುಖ್ಯವಾಗಿ ಹಸುಗಳು ಈ ದೇಶದ ಗ್ರಾಮೀಣ ಬದುಕಿನ, ಅಲ್ಲಿನ ಸಾಂಸ್ಕೃತಿಕ ಮತ್ತು ಆರ್ಥಿಕ ವ್ಯವಸ್ಥೆಯ ಅವಿಭಾಜ್ಯ ಅಂಗ. ಇಲ್ಲಿ ಬರಿದೇ ಹಾಲಿಗಾಗಿ ಗೋ ಸಂಪತ್ತನ್ನು ನೋಡುತ್ತಿಲ್ಲ. ಉಳುಮೆ, ಸಾಗಾಣಿಕೆ, ಗೊಬ್ಬರ ಹೀಗೆ, ನಮ್ಮ ಕೃಷಿ ಪ್ರಧಾನ ಗ್ರಾಮೀಣ ವ್ಯವಸ್ಥೆಗೆ ಇದು ಭದ್ರ ಬುನಾದಿ ಹಾಕಿರುತ್ತದೆ. ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಸುಮಾರು 20 ಕೋಟಿ ಹಸುಗಳಿದ್ದು, ಇವುಗಳಿಂದ 80 ಕೋಟಿ ಟನ್‌ಗಳಷ್ಟು ಸಗಣಿ ದೊರಕುತ್ತಿದೆ. ಇವುಗಳಿಂದ ಉಳುಮೆ, ಸಾಗಾಣಿಕೆ ಇತ್ಯಾದಿ ಕಾರ್ಯಗಳಿಗೆ ಸಿಗುವ ಸೇವೆಯ ಮೌಲ್ಯ ಏನಿಲ್ಲಾ ಅಂದರೂ ವಾರ್ಷಿಕ 10,000 ಕೋಟಿ ರೂಗಳು ಎನ್ನಲಾಗಿದೆ. ನಮ್ಮ ಈ 30 ದೇಶೀಯ ತಳಿಗಳಲ್ಲಿ ಬಹುಪಾಲು ಈ ಕಾರ್ಯಗಳಿಗೇ ಹೇಳಿ ಮಾಡಿಸಿದಂತಿರುತ್ತವೆ. ಇನ್ನು, ಗೋಮೂತ್ರದ ವಿಚಾರಕ್ಕೆ ಬಂದಲ್ಲಿ, ಅದರ ಔಷಧೀಯ ಮಹತ್ವಕ್ಕೆ ಎಲ್ಲೆಯೇ ಇರಲಾರದು. ಆಯುರ್ವೇದದಲ್ಲಿ ಇದು ಈಗಾಗಲೇ ಸಾಬೀತಾಗಿದೆ. ಈಗೀಗ, ಗೋಮೂತ್ರವನ್ನು ಮೂಲವಾಗಿಟ್ಟುಕೊಂಡು ಹಲವಾರು ನಾಟಿ ಸಸ್ಯ ಸಂರಕ್ಷಣಾ ಕ್ರಮಗಳು ಮೇಲೇಳುತ್ತಿವೆ. ಇವೆಲ್ಲಕ್ಕಿಂತ ಮಿಗಿಲಾಗಿ ಈ ಗೋಸಂಪತ್ತು ನಮ್ಮ ಗ್ರಾಮೀಣ ಪ್ರದೇಶದಲ್ಲಿ ಶೇ.70 ರಷ್ಟು ಮಹಿಳೆಯರೂ ಸೇರಿದಂತೆ ಬಡಜನತೆಗೆ ಜೀವನ ಭದ್ರತೆ ಒದಗಿಸುತ್ತಿದೆ.

ಹಾಗಾಗಿ, ಈ ನಾಟಿ ಗೋತಳಿ ಸಂರಕ್ಷಣೆಯಂತಹ ಮಹತ್ವದ ಕಾರ್ಯವು ಬರಿದೇ ಧಾರ್ಮಿಕ ಚೌಕಟ್ಟಿನೊಳಗೆ ಸೀಮಿತಗೊಳ್ಳಬಾರದು. ಇದು ಅಮೂಲ್ಯ ಜೀವ (ತಳಿ) ವೈವಿಧ್ಯ ಸಂರಕ್ಷಣೆಯಂತಹ ಒಂದು ರಾಷ್ಟ್ರೀಯ ಕಾರ್ಯವಾಗಬೇಕಾಗಿದೆ.

ಕಬ್ಬಿನ ಸಿಪ್ಪೆಬಳಸಿ ಜೈವಿಕ ಅನಿಲ ತಯಾರಿಕೆಯಿಂದ ಹಿಡಿದು ತಾಜಾ ಕಬ್ಬಿನ ಹಾಲನ್ನು ವ್ಯವಸ್ಥಿತ ರೀತಿಯಲ್ಲಿ ಶೇಖರಿಸಿ ಗ್ರಾಹಕರಿಗೆ ಸುಲಭವಾಗಿ ದೊರಕಿಸುವ ಕೇನ್-ಓ-ಲಾ ದಂತಹ ಸಾಹಸಗಳು ಬೆಳಕಿಗೆ ಬಂದಿರುತ್ತವೆ. ಹಾಗೇ, ಎಳನೀರಿನ ಸಿಪ್ಪೆ ತೆಗೆದು ಸಿಂಗರಿಸಿ ಸುಲಭವಾಗಿ ಗ್ರಾಹಕರಿಗೆ ದೊರಕಿಸುವ ಪ್ರಯತ್ನ ಕೂಡ ಶುರುವಾಗಿದೆ. ಇವೆಲ್ಲ 'ಹಿತ್ತಲಗಿಡ' ಗಟ್ಟಿಗೊಂಡ, ವ್ಯವಸ್ಥಿತಗೊಳ್ಳುವ ಶುಭ ಲಕ್ಷಣಗಳಾಗಿವೆ.

ಡಾ। ಪ್ರಕಾಶ್ ಕಮ್ಮರಡಿ

ಮೇವಾಗಿ ಕಬ್ಬಿನ ಮೇಲ್ ಚಿಗುರು

ಶಿರಸಿ ತಾಲೂಕಿನ ದೊಡ್ಡನಹಳ್ಳಿ ಗ್ರಾಮದ ಸುರೇಶ್ ವೆಂಕಟರಮಣ ಭಟ್ಟರು ಹಸಿರು ಹುಲ್ಲು ಸಿಗದಿರುವಾಗ ದನಗಳಿಗೆ ಕಬ್ಬಿನ ಮೇಲಿನ ಚಿಗುರು ತುದಿ(ಗರಿ)ಯನ್ನು ಮೇವಾಗಿ ಬಳಸುವ ರೀತಿಯನ್ನು ಕಂಡು ಕೊಂಡಿದ್ದಾರೆ. ಈ ಕಬ್ಬಿನ ಎಲೆಯ ಪಕ್ಕೆಗಳು ಬ್ಲೇಡ್‌ನ ತರಹ ಹರಿತವಾಗಿರುವುದರಿಂದ ಹಸುಗಳು ಬಾಯಿಗೆ ಹಾಕಿಕೊಂಡರೆ ಗಾಯ ಉಂಟಾಗುತ್ತಿತ್ತು. ಹಾಗಾಗಿ ದನ ಕರುಗಳ ಮೇವಾಗಿ ಈ ಮೇಲ್ಭಾಗ ಬಳಸಿದರೆ ಅದರಿಂದ ಅನಾಹುತವಾಗುತ್ತದೆ ಎಂದು ಬಾವಿಸಿದ ರೈತರು ಅವುಗಳನ್ನು ಹೊಲಗಳಲ್ಲಿಯೇ ಸುಡುತ್ತಿದ್ದರು.ಆದರೆ ವೆಂಕಟರಮಣ ಭಟ್ಟರು ಇದಕ್ಕೆ ಪರ್ಯಾಯವಾಗಿ ಕಬ್ಬು ಗರಿಯನ್ನು ಮೇವಾಗಿ ಉಪಯೋಗಿಸುವ ರೀತಿ ಹೀಗಿದೆ.



ಕಬ್ಬು ಗರಿಯನ್ನು ಚಿಕ್ಕದಾಗಿ ಕತ್ತರಿಸಿ ಕೊಂಡು , ಅದರ ಹಸಿರು ಒಣಗದ ಹಾಗೆ ನೆರಳಿನಲ್ಲಿ ಶೇಖರಿಸಿಡಬೇಕು. ನಂತರ 15 ಲೀಟರ್ ನೀರು, ಎರಡು ಕೆ.ಜಿ. ಉಪ್ಪು ಮತ್ತು ಮೂರು ಲೀಟರ್ ಕಾಕಂಬಿಯನ್ನು ಒಂದು ಕ್ವಿಂಟಾಲ್ ಕತ್ತರಿಸಿರುವ ಗರಿಗೆ ಮಿಶ್ರಣ ಮಾಡಬೇಕು. ಸಿಮೆಂಟಿನ ರಿಂಗು ಅಥವಾ ತೊಟ್ಟಿಗಳಲ್ಲಿ ಹಾಕಿ, ಅದನ್ನು ತುಂಬಾ ದಪ್ಪ ಇರದ ಪ್ಲಾಸ್ಟಿಕ್ ಪೇಪರ್‌ಗಳಿಂದ ಮುಚ್ಚಬೇಕು. ಗರಿಗಳಿಗೆ ಬೂಸ್ಟ್ ಬರದೇ ಇರುವ ಮತ್ತು ಗಾಳಿ ಆಡದ ಹಾಗೆ ಸಿಮೆಂಟ್ ರಿಂಗುಗಳಿಗೆ ಮಣ್ಣನ್ನು ಮೆತ್ತಬೇಕು. ಈ ಪದ್ಧತಿಯನ್ನು ನೆರಳಿರುವ ಜಾಗದಲ್ಲೇ ಮಾಡಬೇಕು. ಇದನ್ನು 21 ದಿನಗಳವರೆಗೆ ಬಿಡಬೇಕು. ನಂತರ ಇದನ್ನು ದಿನಕ್ಕೆ ಅರ್ಧ ಕೆ.ಜಿ. ಯಿಂದ ಪ್ರಾರಂಭಿಸಿ 10 ಕೆ. ಜಿ. ಯವರೆಗೆ ಹಸುಗಳಿಗೆ ಕೊಡಬಹುದು. ಇಂತಹ ಮೇವಿಗೆ ಆ ಭಾಗದಲ್ಲಿ 'ರಸ ಮೇವು' ಎನ್ನುತ್ತಾರೆ. ವೆಂಕಟರಮಣ ಭಟ್ಟರು ತಮ್ಮ ಮೂರು ಎಕರೆಯಲ್ಲಿ ಬೆಳೆಯುವ ಕಬ್ಬಿನ ಮೇಲ್ಭಾಗವನ್ನು ಈ ರೀತಿ ಮೇವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಬೇಸಿಗೆಯಲ್ಲಿ ತಮ್ಮ ಎಂಟು ಹಸುಗಳಿಗೆ ಈ ಪದ್ದತಿಯಿಂದ ಮೇವು ನೀಡಿ ಸುರೇಶ ವೆಂಕಟರಮಣ ಭಟ್ಟರು ವರ್ಷಕ್ಕೆ ಏನಿಲ್ಲಾ ಅಂದರೂ 13,500 ರೂ ಅಧಿಕ ಲಾಭಗಳಿಸುತ್ತಿದ್ದಾರೆ. ಇವರನ್ನು ನೋಡಿ ಹಳ್ಳಿಯಲ್ಲಿ ಇತರರೂ ಈ ಪದ್ದತಿಯನ್ನು ಅನುಸರಿಸುತ್ತಿದ್ದಾರೆ. ಈ ಪದ್ದತಿಯನ್ನು ಈ ಹಿಂದೆ ಯಾರೂ ಅನುಸರಿಸಿಲ್ಲ ಎಂಬುದು ಭಟ್ಟರ ಹೇಳಿಕೆ. ಇವರು ತಮ್ಮ ಪರಿಚಿತ ವಿಜ್ಞಾನಿ ಡಾ. ಡಿ.ಎನ್ ಹೆಗಡೆಯವರ ಮಾರ್ಗದರ್ಶನದಲ್ಲಿ ಇದನ್ನು ಪ್ರಯೋಗಿಸಿದ್ದು, ಕಳೆದ ಆರು ವರ್ಷಗಳಿಂದಲೂ ಅನುಸರಿಸುತ್ತಿದ್ದಾರೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ವಿಳಾಸ : ಸುರೇಶ್ ವೆಂಕಟರಮಣ ಭಟ್, ದೊಡ್ಡನಹಳ್ಳಿ , ಶಿರಸಿ, ಕರ್ನಾಟಕ - 581402. ದೂರವಾಣಿ - 08384 243506.

ಅಕ್ಕಿ ಕಾಳಲ್ಲಿ ಅಕ್ಷರ

ಸಾಮಾನ್ಯವಾಗಿ ಅಕ್ಕಿ ಕಾಳಿನ ಮೇಲೆ ಹೆಸರು ಬರೆಯುವ ಸಾಧನೆಯನ್ನು ನೋಡಿರಬಹುದು. ಆದರೆ, ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಕಟ್ಟಿಗೇನಹಳ್ಳಿಯ ಲಕ್ಷ್ಮಿಪತಿಯವರು ಒಂದೇ ಕಾಳಿನ ಮೇಲೆ 300 ಅಕ್ಷರಗಳ ಭಾರತದ ರಾಷ್ಟ್ರಗೀತೆಯನ್ನು ಇಂಗ್ಲೀಷ್‌ನಲ್ಲಿ ಬರೆದು ವಿಕ್ರಮ ಮಾಡಿದ್ದಾರೆ. ವಿಶೇಷವೆಂದರೆ ಕೋಳಿ ರೆಕ್ಕೆಯಿಂದ ಪೆನ್ನು ತಯಾರಿಸಿ ಕೊಂಡು ಅಕ್ಕಿಯ ಮೇಲೆ ಬರಿಗಣ್ಣಿನಿಂದ ಬರೆಯುವ ಇವರಿಗೆ ಕೂದಲುಗಳ ಮೇಲೆಯೂ ಬರವಣಿಗೆ ಮಾಡುವಷ್ಟು ಸೂಕ್ಷ್ಮತೆ ಇರುತ್ತದೆ. ಹಾಗೆ, ಒಂದು ಕೂದಲನ್ನು 5-6 ಸೀಳುಗಳನ್ನಾಗಿಯೂ ಮಾಡ ಬಲ್ಲವ ರಾಗಿರುತ್ತಾರೆ. ಇವರು ಮೊದಲಿಗೆ ಒಂದು ಡಬ್ಬಲ್‌ಗಮ್ ಟೇಪನ್ನು ಹೆಬ್ಬೆಟ್ಟಿಗೆ ಸುತ್ತಿ ಕೊಂಡು, ಅದರ ಮೇಲೆ ಅಕ್ಕಿ ಕಾಳನ್ನು ಅಂಟಿಸಿಕೊಳ್ಳುತ್ತಾರೆ. ಸೂಕ್ಷ್ಮದರ್ಶಕ ವಿಲ್ಲದೇ ನೇರವಾಗಿ ಅಕ್ಷರ ಹಾಗೂ ಚಿತ್ರಗಳನ್ನು ಕುಂಚದ ಸಹಾಯದಿಂದ ಬಿಡಿಸಿ, ಅದರ ಮೇಲೆ ಗಮ್ ಅಂಟಿಸು ತ್ತಾರೆ. ಇಂತಹ ಚಿತ್ರಿತ ಅಕ್ಕಿಕಾಳನ್ನು ನೀರಿರುವ ಒಂದು ಗ್ಲಾಸಿನೊಳಗೆ ಹಾಕಿ ನೋಡಿದರೆ ಅಕ್ಷರಗಳು ಹಾಗೂ ಚಿತ್ರಗಳು ಅಂದವಾಗಿ ಹಾಗೂ ದಪ್ಪವಾಗಿ ಕಾಣಿಸುತ್ತವೆ. ಇವರ ಬಳಿ ಗಣಪತಿ, ಭಾರತದ ಪತಾಕೆ, ಗಾಂಧೀಜಿ, ಸುಭಾಷ್‌ಚಂದ್ರ ಬೋಸ್, ತಾಜ್‌ಮಹಲ್, ಅಶೋಕ ಚಕ್ರ ಮತ್ತಿತರೆ ಬರಹ-ಕಲೆಗಳನ್ನು ಬಿಡಿಸಿರುವ 500ಕ್ಕೂ ಹೆಚ್ಚು ಅಕ್ಕಿ ಕಾಳುಗಳ ಸಂಗ್ರಹವೇ ಇದೆ.



ರಸ್ತೆಗೆ ರಬ್ಬರ್ ಬಳಕೆ !

ರಬ್ಬರ್‌ನಿಂದ ಅನೇಕ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ. ಆದರೆ ಡಾಂಬರಿನ ಜೊತೆಗೆ ರಬ್ಬರು ಉಪಯೋಗಿಸಿಕೊಂಡು ರಸ್ತೆ ನಿರ್ಮಿಸುವ ಆಲೋಚನೆಯನ್ನು ಕಾರ್ಯರೂಪಕ್ಕೆ ತಂದವರು ಉಜಿರೆಯ ರಬ್ಬರ್ ಬೆಳೆಗಾರ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀಧರ ಜಿ. ಬಿಡೆಯವರು. ಬೆಳ್ತಂಗಡಿ ತಾಲೂಕಿನ ಉಜಿರೆಯಲ್ಲಿ ಈ ರೀತಿಯ ರಬ್ಬರ್ ರಸ್ತೆಯನ್ನು ಸೊಸೈಟಿಯ ಆವರಣದಲ್ಲಿ ನಿರ್ಮಿಸಿ ಎರಡು ವರ್ಷವಾಗಿದೆ. ಈ ರಸ್ತೆಯ ಹಾಸು ಮಸುಕಾಗಿಲ್ಲ, ಗುಳಿ ಬಿದ್ದಿಲ್ಲ, ಕಿತ್ತುಹೋಗಿಲ್ಲ, ಹಲವಾರು ಟನ್‌ಗಳನ್ನು ಹೊತ್ತ ಲಾರಿಗಳು ಬಂದರೂ ಜಗ್ಗಿಲ್ಲ. ಹಾಗಿದ್ದ ಮೇಲೆ ಸರಕಾರ ಇದರ ಬಗ್ಗೆ ಆಲೋಚಿಸಿ, ಡಾಂಬರಿನ ಜೊತೆ ರಬ್ಬರ್ ಮಿಶ್ರಣ ಮಾಡಿದರೆ ರಬ್ಬರ್ ಬೆಳೆಗಾರರಿಗೂ ಉಪಕಾರ ಮಾಡಿದಂತಾಗುತ್ತದೆ ಎಂದು ಶ್ರೀಧರ್ ಬಿಡೆಯವರು ಹೇಳುತ್ತಾರೆ.ಇದರಿಂದ ಪ್ರತೀ ಚದರ ಅಡಿ ರಸ್ತೆಗೆ ಶೇ. 10 ರಷ್ಟು ಖರ್ಚು ಅಧಿಕವಾದರೂ ಶೇ 50ರಷ್ಟು ಅಧಿಕ ಬಾಳಿಕೆ ಬರುತ್ತದೆ. ಇದಕ್ಕೆ ಅಡಿಗೆ ಅಂದಾಜು 16ರೂ ತಗಲುತ್ತದೆ. ಕಾಂಕ್ರಿಟೀಕರಣದಷ್ಟು ದೃಢವಾಗಿರುವ ಕಾರಣ ಇದನ್ನು ಮನೆಯ ತಾರಸಿಗೂ ಕೂಡ ಬಳಸಬಹುದಾಗಿದೆ.




ರಾಜ್ಯದಲ್ಲಿಯೇ ಅತಿ ಹೆಚ್ಚು ರಬ್ಬರ್ ಬೆಳೆಯುವ ಜಿಲ್ಲೆ ದಕ್ಷಿಣ ಕನ್ನಡ. ರಾಜ್ಯದ ಒಟ್ಟು ಉತ್ಪಾದನೆಯಲ್ಲಿ ಶೇ. 50 ರಷ್ಟು ಈ ಸಂಘದ ಮೂಲಕ ವ್ಯವಹಾರವಾಗುತ್ತಿದೆ.

ಮೂಲ -ವಿಜಯ ಕರ್ನಾಟಕ, 3 ಮೇ 2006.

ಮಂಗಗಳನ್ನು ಹಿಡಿಯುವ ಸುಲಭ ವಿಧಾನ

ಮಂಗಗಳನ್ನು ನಿಯಂತ್ರಿಸಲು ಶಿರಸಿಯ ಬನವಾಸಿ ಸಮೀಪ ನರೂರಿನ ಕೃಷಿಕರಾದ ಶ್ರೀಕಾಂತ್ ಭಟ್ ಮತ್ತು ರಘುನಂದ ಭಟ್ ಒಂದು ಸರಳ ಪಂಜರ ತಯಾರಿಸಿರುತ್ತಾರೆ. ಆದರಲ್ಲಿ ಮಂಗಗಳ ಇಡೀ ಕುಟುಂಬವನ್ನೇ ಹಿಡಿದು ಹೊರಗೆ ಬಿಟ್ಟು ಬರುವ ಸಾಹಸ ಕೈಗೊಂಡಿರುವರು.

ಸುಮಾರು 4-6 ವರ್ಷಗಳಿಂದ ಮಂಗಗಳ ಚಲನವಲನ, ಅವುಗಳ ಜೀವನ ಕ್ರಮವನ್ನು ಗಮನಿಸಿರುವ ಇವರು ಅವುಗಳ ಸಾಮಾಜಿಕ ಮನೋವಿಜ್ಞಾನ ಹಾಗೂ ಕುಟುಂಬ ವ್ಯವಸ್ಥೆಯ ಬಗ್ಗೆ ಆಳವಾದ ಅಧ್ಯಯನ ಮಾಡಿರುತ್ತಾರೆ. ಇವರು ಹೇಳುವಂತೆ ಮಂಗಗಳಲ್ಲಿ ಕೌಟುಂಬಿಕ ಪದ್ಧತಿ ಗಟ್ಟಿಯಾಗಿದ್ದು, ಪ್ರತಿ ಕುಟುಂಬ ತನ್ನದೇ ಆದಂತಹ ಒಂದು ನಿರ್ಧಿಷ್ಟ ಭೌತಿಕ ಗಡಿಯನ್ನು ಹೊಂದಿರುತ್ತದೆ. ಒಂದೇ ಕುಟುಂಬದಲ್ಲಿ 8 ರಿಂದ 14 ಮಂಗಗಳಿರುತ್ತವೆ. ಇಡೀ ಕುಟುಂಬದ ಮಂಗಗಳನ್ನು ಹಿಡಿದು ಬಂಧಿಸಲು, ಎರಡು ಕೋಣೆಗಳಿರುವ ಒಂದು ಪಂಜರವನ್ನು ಇವರು ಮೊದಲು ತಯಾರಿಸಿದರು. ಕುಟುಂಬದ ಒಂದು ಸದಸ್ಯನಿಗೆ ಊಟ, ತಿಂಡಿ ಇಟ್ಟು ಆಸೆ ತೋರಿಸಿ ಹೇಗಾದರೂ ಮಾಡಿ, ಬಂಧಿತವಾಗುವಂತೆ ಮಾಡಲಾಗುತ್ತದೆ. ನಂತರ ಆದನ್ನು ಹುಡುಕಿಕೊಂಡು ಬರುವ ಉಳಿದವುಗಳೆಲ್ಲವೂ 24 ಗಂಟೆಯೊಳಗೆ ಅದೇ ಪಂಜರದಲ್ಲಿ ಬಂಧಿತವಾಗುತ್ತವೆ. ಈ ಪಂಜರವನ್ನು ಕಬ್ಬಿಣದ ಅಥವಾ ಇನ್ಯಾವುದೇ ಹೊರಗಿನ ಉಪಕರಣಗಳಿಂದ ಮಾಡಿದರೆ ಅದರ ಅಪಾಯವನ್ನು ಅರಿತ ಮಂಗಗಳು ದೂರವೇ ಉಳಿಯುತ್ತವೆಯಂತೆ. ಈ ಕಾರಣಕ್ಕಾಗಿಯೇ ಸ್ಥಳೀಯವಾಗಿ ಮಂಗಗಳು ಚೆನ್ನಾಗಿ ಬಲ್ಲ ಅಡಿಕೆ ಮರದ ದಬ್ಬೆ ಉಪಯೋಗಿಸಿಕೊಂಡು ಪಂಜರವನ್ನು ತಯಾರಿಸಲಾಗಿರುವುದು. ಇದಕ್ಕೆ ತಗಲುವ ಖರ್ಚು 500 ರೂಗಳು ಮಾತ್ರ. ಬಂಧಿತವಾಗುವಂತಹ ಮಂಗಗಳಿಗೆ 2 ದಿನ ಊಟ, ನೀರು ಕೊಡಲಾಗುತ್ತದೆ. ನಂತರ ಅವುಗಳನ್ನು ಗಾಡಿಯಲ್ಲಿ ಮರೆಮಾಡಿ, 20-25 ಕಿ.ಮಿ. ದೂರ ಕೊಂಡೊಯ್ದು ಕಾಡಿಗೆ ಬಿಡಲಾಗುತ್ತದೆ.




ಈ ರೀತಿಯಲ್ಲಿ ರಘುನಂದ ಭಟ್ಟರು ಸುಮಾರು ಆರು ಮಂಗಗಳ ಕುಟುಂಬಗಳನ್ನು ಹಿಡಿದು ಅವುಗಳ ಕಾಟವನ್ನು ಬಹುಪಾಲು ಕಡಿಮೆ ಮಾಡಿರುತ್ತಾರೆ. ಇವರ ವಿಧಾನವನ್ನು ಅನುಸರಿಸಿ ಸುಮಾರು 8-10 ಬೋನುಗಳನ್ನು ಅಕ್ಕ ಪಕ್ಕದಲ್ಲಿ ಹಾಗೂ ದಾವಣಗೆರೆ, ಹುಬ್ಬಳ್ಳಿಯಲ್ಲೂ ಕೆಲವರು ತಯಾರಿಸಿಕೊಂಡು ಉಪಯೋಗವನ್ನು ಪಡೆಯು ತ್ತಿದ್ದಾರೆ. ಭಟ್ಟರು ಈಗ ಸುಲಭವಾಗಿ ತೆಗೆದು ಜೋಡಿಸಬಹುದಾದಂತಹ ಪಂಜರವನ್ನು ತಯಾರಿಸಿರುತ್ತಾರೆ. ಆಸಕ್ತಿ ಇರುವವರಿಗೆ ಮುಕ್ತವಾಗಿ ಸಲಹೆ, ತಂತ್ರಜ್ಞಾನ ಹೇಳಿ ಕೊಡಲು ತಯಾರಿರುತ್ತಾರೆ. ಅರಣ್ಯ ಇಲಾಖೆಯವರು ಇಲ್ಲಿಯವರೆಗೂ ಇವರ ವಿಧಾನವನ್ನು ಗಮನಿಸ ದಿರುವುದಕ್ಕೆ ಇವರು ವಿಷಾದ ವ್ಯಕ್ತಪಡಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ರಘುನಂದ ಭಟ್‌ರ ವಿಳಾಸ : ನರೂರು ಅಂಚೆ, ಶಿರಸಿ ತಾಲ್ಲೂಕು, ಉತ್ತರ ಕನ್ನಡಜಿಲ್ಲೆ. ದೂರವಾಣಿ : 08384-264336
ಮೂಲ : ಪ್ರಜಾವಾಣಿ, 25 ಅಕ್ಟೋಬರ್ 2006.


ಆಕಳುಗಳಲ್ಲಿ ಪರಾವಲಂಬಿಗಳ ನಿಯಂತ್ರಣ

ಅಜೇಶ್ ಕೇರಳ ರಾಜ್ಯದವರು. ಇವರು ದನಗಳ ಮೇಲೆ ಕಂಡುಬರುವ ನೊಣ ಮತ್ತು ಹೇನುಗಳನ್ನು ನಿಯಂತ್ರಿಸಲು ಪಣಿಕುರ್ಕ (*Clerodendroz phlomidis*) ಎಂಬ ಗಿಡದಿಂದ ಒಂದು ನಾಟಿ ಔಷಧಿ ತಯಾರಿಸಿ ಬಳಸುತ್ತಿದ್ದಾರೆ. ಇದರ ಎಲೆಯನ್ನು ಸಣ್ಣಗೆ ರುಬ್ಬಿ ನೀರು ಬೆರೆಸಿ ದ್ರಾವಣ ತಯಾರಿಸುತ್ತಾರೆ. ಈ ಮಿಶ್ರಣವನ್ನು ಆಕಳ ಮೈ ಮೇಲೆ ಸವರುವರು. ಇದರ ಪರಿಣಾಮವಾಗಿ ಕೀಟಗಳ ನಿಯಂತ್ರಣವಾಗಿ ಆಕಳು ಆರೋಗ್ಯವಾಗಿರುತ್ತವೆ ಎನ್ನುವರು ಅಜೇಶ್.



ಆಕಳುಗಳಲ್ಲಿ ಬಿಸಿಲ ಜಳವನ್ನು ತಣಿಸಲು

ಪ್ರಧಾನ್ ಒರಿಸ್ಸಾ ರಾಜ್ಯದ ನುವಾಸರ್‌ಸರಾ ಗ್ರಾಮದವರು. ಇವರು ಬೇಸಿಗೆಯಲ್ಲಿ ಆಕಳುಗಳ ಮೇಲೆ ಬೀಳುವ ಸುಡು ಬಿಸಿಲ ಜಳವನ್ನು ನಿಯಂತ್ರಿಸಲು ನಾಟಿ ಔಷಧಿ ಒಂದನ್ನು ಕಂಡು ಹಿಡಿದಿದ್ದಾರೆ. ಶತಾವರಿ (*Racemosus, willd*) ಗಿಡದ 200 ಗ್ರಾಂ ನಷ್ಟು ಎಲೆಗಳ ರಸವನ್ನು ತೆಗೆದು ನೀರಿನೊಂದಿಗೆ ಸೇರಿಸುವರು. ಇದನ್ನು ಆಕಳುಗಳ ಮೈ ಮೇಲೆ ಎರಡು ದಿನಗಳಿಗೊಮ್ಮೆ ಸವರುವರು. ಈ ರೀತಿ ಮಾಡು ವುದರಿಂದ ಬಿಸಿಲ ಜಳ ಕಡಿಮೆಯಾಗುತ್ತದೆ ಎನ್ನುವರು ಪ್ರಧಾನ್.



ಮೂಲ : ಹನಿಬೀ vol 17(4) 18(1) ಅಕ್ಟೋಬರ್-ಡಿಸೆಂಬರ್ 2006, ಮತ್ತು ಜನವರಿ - ಮಾರ್ಚ 2007.

ನಳಪಾಕ
ಅಡಿಕೆಯಿಂದ ಲಘುಪೇಯ "ಸುಫಾನ"


ದಕ್ಷಿಣ ಕನ್ನಡ ಜಿಲ್ಲೆಯ, ವಿಟ್ಲದ ಬದನಾಜೆ ಶಂಕರಭಟ್ಟರು ಎಳೆಯ ಅಡಿಕೆಯಿಂದ ಲಘು ಪೇಯ ತಯಾರಿಸುವ ವಿಧಾನವನ್ನು ಕಂಡುಹಿಡಿದಿದ್ದಾರೆ. ಈ ಪೇಯಕ್ಕೆ 'ಸುಫಾನ' ಎಂದು ಹೆಸರಿಸಿದ್ದಾರೆ. ಅಡಿಕೆಯ ಬಳಕೆ ಜೀರ್ಣಕಾರಿ ಜೊತೆಗೆ ಮಲಬದ್ಧತೆ ಮತ್ತು ಬಾಯಾರಿಕೆಯನ್ನು ದೂರಮಾಡುತ್ತದೆ. ಈ ಪಾನೀಯದಲ್ಲಿ ಅಡಿಕೆಯ ಈ ಎಲ್ಲಾ ಔಷಧೀಯ ಗುಣಗಳು ಅಡಕವಾಗಿವೆ. ಜಾಯಿಕಾಯಿ, ವೆನಿಲ್ಲಾ, ಕೊತ್ತಂಬರಿ, ವೀಳ್ಯದೆಲೆ ಮೊದಲಾದ ಔಷಧೀಯ ಹಾಗೂ ಪರಿಮಳ ವಸ್ತುಗಳನ್ನೂ ಸೇರಿಸಲಾಗಿದೆ. ಇದರ ಉಪಯೋಗವು ಮಲಬದ್ಧತೆಯನ್ನು ನಿವಾರಿಸುತ್ತದೆ. ಭೋಜನ ಪೂರ್ವದಲ್ಲಿಯೂ, ಭೋಜನದ ನಂತರವೂ ಇದು ಸೇವನಾ ಯೋಗ್ಯವಾಗಿದೆ. ಇದರಲ್ಲಿ ಯಾವುದೇ ರಾಸಾಯನಿಕಗಳು, ಕೃತಕ ವರ್ಣಗಳು, ಹಾನಿಕಾರಕ ವಸ್ತುಗಳಿಲ್ಲ. ಮಕ್ಕಳು, ವೃದ್ಧರು, ಗರ್ಭಿಣಿ, ಬಾಣಂತಿ ಮತ್ತಿತರರೂ ಇದನ್ನು ಸೇವಿಸಬಹುದಾಗಿದೆಯಂತೆ.

ರೈತ ಮೂಲದ ಎರಡು ಕಳೆ ತೆಗೆಯುವ ಯಂತ್ರಗಳು

ಮಲೆನಾಡು, ಅರೆಮಲೆನಾಡು, ಬಯಲುಸೀಮೆ ಈ ಎಲ್ಲಾ ಕಡೆಗಳಲ್ಲಿ ಬೆಳೆಗಳನ್ನು ಬೆನ್ನು ಹತ್ತಿದ ಬೇತಾಳದಂತೆ ಬಾಧಿಸುವುದು ಕಳೆ. ಇದನ್ನು ಪರಿಹರಿಸಿಕೊಳ್ಳಲು ರೈತರಿಬ್ಬರು ಸಂಶೋಧಿಸಿರುವ ಎರಡು ಯಂತ್ರಗಳ ವಿವರ ಇಲ್ಲಿದೆ.

ಬಯಲು ಸೀಮೆಯಲ್ಲಿ ಈರುಳ್ಳಿ ಬೆಳೆಯುವ ರೈತರಿಗೆ ಕಳೆ ತೀರದ ಬವಣೆ. ಈರುಳ್ಳಿ ಕಟಾವಿಗೆ ಬರುವಷ್ಟರಲ್ಲಿ ಎಂಟ್ಹತ್ತು ಬಾರಿ ಕಳೆ ತೆಗೆಯಬೇಕಾಗುತ್ತದೆ. ಕೂಲಿ ಕಾರ್ಮಿಕರ ಸಮಸ್ಯೆ ಇದ್ದೇ ಇರುತ್ತದೆ. ಅದರಲ್ಲೂ ಬೇಸಿಗೆ ಹಂಗಾಮಿನಲ್ಲಿ ಬಿಸಿಲು ಹೆಚ್ಚಿರುವುದರ ಜೊತೆಗೆ ನೆಲ ಗಟ್ಟಿಯಾಗಿರುವುದರಿಂದಲೂ ಸಹ ಕೂಲಿ ಕಾರ್ಮಿಕರು ಕಳೆ ಕೀಳುವ ಕೆಲಸಕ್ಕೆ ಬರುವುದಿಲ್ಲ. ಈ ಸಮಸ್ಯೆಗೆ ಪರಿಹಾರೋಪಾಯವಾಗಿ, ಬಾಗಲಕೋಟೆಯ ರೈತರಾದ ಶ್ರೀ ಪರಮಾನಂದಪ್ಪನವರು ಕೈ ಚಾಲಿತ ಕಳೆ ತೆಗೆಯುವ ಯಂತ್ರ ಒಂದನ್ನು ತಯಾರಿಸಿದ್ದಾರೆ. ಇದಕ್ಕೆ ಸೈಕಲ್ಲಿನ ಒಂದು ಚಕ್ರ ಜೋಡಿಸಲಾಗಿದೆ. ಈ ಯಂತ್ರಕ್ಕೆ ಹಲ್ಲು, ತಾಳು ರೀತಿಯ ಕಳೆ ತೆಗೆಯುವ ಸಾಧನವನ್ನು ಜೋಡಿಸಲಾಗಿರುತ್ತದೆ. ಇದರಿಂದ ಮೂಲ ನಾಟಿ ಭತ್ತವನ್ನು ಹೊರತುಪಡಿಸಿ ಮಿಕ್ಕೆಲ್ಲಾ ಬೆಳೆಗಳಲ್ಲಿನ ಕಳೆಯನ್ನು ತೆಗೆಯಬಹುದಾಗಿದೆ. ಇದನ್ನು ಬಳಸಿ ಏಕ ವ್ಯಕ್ತಿ ದಿನದಲ್ಲಿ ಒಂದು ಎಕರೆಗೂ ಹೆಚ್ಚು ಜಮೀನಿನಲ್ಲಿ ಕಳೆ ತೆಗೆಯಬಹುದಾಗಿದೆ. ಶ್ರೀ ಪರಮಾನಂದಪ್ಪನವರ ಬಗ್ಗೆ ಹೆಚ್ಚಿನ ವಿವರವನ್ನು ಪಡೆಯಲು, ಡಾ: ಬಿ. ಮಂಜುನಾಥ, ಸಹಾಯಕ ಕೃಷಿ ನಿರ್ದೇಶಕರು. ಚಳ್ಳಕೆರೆ ತಾಲ್ಲೂಕು. ಚಿತ್ರದುರ್ಗ ಜಿಲ್ಲೆ ಇವರನ್ನು ಸಂಪರ್ಕಿಸಬಹುದು. *ಮೂಲ: ಪ್ರಜಾವಾಣಿ 8/3/2006.*

ಹಾಗೆಯೇ ಅರೆಮಲೆನಾಡು, ಧಾರವಾಡದ ಶ್ರೀ ಉಮೇಶ್ ಜಿ. ಹಾಲಭಾವಿಯವರು ಮತ್ತೊಂದು ಕಳೆತೆಗೆಯುವ ಸಾಧನವನ್ನು ಆವಿಷ್ಕರಿಸಿದ್ದಾರೆ. ಇದರಿಂದ ಒಬ್ಬರು ಅಥವಾ ಇಬ್ಬರು ಕೈ ಬಲದಿಂದ ವಿವಿಧ ಬೆಳೆಗಳಲ್ಲಿ, ವಿವಿಧ ಆಳತೆಯ ಸಾಲುಗಳಲ್ಲಿ ಬೆಳೆದ ಕಳೆಗಳನ್ನು ತೆಗೆಯಬಹುದೆನ್ನುತ್ತಾರೆ. ಇದನ್ನು 6,9,18 ಅಂಗುಲ ಹೀಗೆ ವಿವಿಧ ಅಂತರದಲ್ಲಿ ಕಳೆ ತೆಗೆಯಲು ಅನುಕೂಲವಾಗುವಂತೆ ತಯಾರಿಸಲಾಗಿದೆ. ಈ ಸಾಧನವನ್ನು ಉಪಯೋಗಿಸಬೇಕಾದರೆ ಕಳೆಯು 2-3 ಅಂಗುಲ ಎತ್ತರವಿದ್ದು, ಭೂಮಿ ಕಳೆ ತೆಗೆಯುವ ಮಟ್ಟಿಗೆ ಹದವಾಗಿರಬೇಕೆನ್ನುವರು. ಸಾಮಾನ್ಯವಾಗಿ ಎಲ್ಲಾ ರೈತರು ಇದರ ಉಪಯೋಗ ಪಡೆಯ ಬಹುದೆನ್ನುತ್ತಾರೆ. ಅಲ್ಲದೆ, ಈ ಸಾಧನವನ್ನು ಉಪಯೋಗಿಸಿ ಬೆಳೆಗಳಿಗೆ ಮಣ್ಣು ಏರಿಸಬಹುದು. ಸಾಲುಗಳ ಮಧ್ಯೆ ಕಾಲುವೆ ಮಾಡಬಹುದೆನ್ನುತ್ತಾರೆ. ಇದನ್ನು ಇತರ ಕೆಲಸಗಳಿಗೂ ಅಂದರೆ ನೀರು, ಗೊಬ್ಬರ, ಕಟ್ಟಿಗೆ ಇತ್ಯಾದಿ ಸಾಗಿಸಲು ತಳ್ಳು ಗಾಡಿಯ ರೀತಿಯಲ್ಲೂ ಬಳಸಬಹುದೆನ್ನುತ್ತಾರೆ. ಉಮೇಶ್ ಹಾಲಬಾವಿಯವರು ಈಗಾಗಲೇ ಎರಡು ಮಾದರಿಯ ಕಳೆ ತೆಗೆಯುವ ಯಂತ್ರಗಳನ್ನು ತಯಾರಿಸಿದ್ದು, ಮತ್ತಷ್ಟು ಪರಿಷ್ಕರಿಸಿದ ಮೂರನೆಯದನ್ನು ರೂಪಿಸಿರುವರು. ಇದರ ಬೆಲೆ ಸುಮಾರು 7800 ರೂಗಳಾಗುತ್ತದೆ. *ಹೆಚ್ಚಿನ ಮಾಹಿತಿ ಬೇಕಾದಲ್ಲಿ ಸಂಪರ್ಕಿಸಬೇಕಾದ ವಿಳಾಸ :ಉಮೇಶ್ ಜಿ.ಹಾಲಬಾವಿ, ಶಾಂತಿನಿವಾಸ, 1ನೇ ಮಹಡಿ, ಹಾಲಬಾವಿ ಕಾಂಪೌಂಡ್, ಉಳವಿ ಬಸವೇಶ್ವರ ಗುಡಿ ಹತ್ತಿರ, ಧಾರವಾಡ. ದೂರವಾಣಿ 0836-244866.*



ತೆಂಗು ತ್ಯಾಜ್ಯ ಪುಡಿಮಾಡುವ ಯಂತ್ರ

ಗುಬ್ಬಿ ತಾಲ್ಲೂಕಿನ ಎನ್. ಮೃತ್ಯುಂಜಯಪ್ಪನವರ ತೋಟದಲ್ಲಿ 10 ಟ್ಯಾಕ್ಟರ್ ಲೋಡ್‌ಗೂ ಹೆಚ್ಚು ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು ಇದನ್ನು ಹೊರಗೆ ಸಾಗಣೆ ಮಾಡುವುದು ಸಮಸ್ಯೆಯಾಗಿತ್ತು. ಇದನ್ನು ಪುಡಿ ಮಾಡಿ ತೋಟಕ್ಕೆ ಮುಚ್ಚಿಗೆಯಾಗಿ ಏಕೆ ನೀಡಬಾರದು ಎಂಬ ಯೋಚನೆ ಇವರಿಗೆ ಒಮ್ಮೆ ಹೊಳೆಯಿತು. ತಕ್ಷಣ ತಾವೇ ಸ್ವತಃ ಒಂದು ವಿನ್ಯಾಸವನ್ನು ಸಿದ್ದಪಡಿಸಿ, ಪರಿಚಯದ ವರ್ಕ್ ಶಾಪಿನವರ ಸಹಾಯದಿಂದ 'ತ್ಯಾಜ್ಯಪುಡಿ ಮಾಡುವ ಯಂತ್ರ' ಒಂದನ್ನು ಸಿದ್ದಪಡಿಸಿದರು. ಇದಕ್ಕೆ 'ರೈತ ಬಂಧು' ಎಂದು ಹೆಸರಿಸಿದ್ದಾರೆ. ಇದು ವಿದ್ಯುತ್ ಚಾಲಿತವಾಗಿದ್ದು, 5 ಎಚ್.ಪಿ. ಸಾಮರ್ಥ್ಯದ ಮೋಟಾರನ್ನು ಹೊಂದಿರುತ್ತದೆ. ಇದರಲ್ಲಿ ಸಸ್ಯ ತ್ಯಾಜ್ಯವನ್ನು ಹಾಕಿದರೆ ಒಂದು ಅಂಗುಲ ಆಳತೆಯಂತೆ ಪುಡಿಯಾಗಿ ಉದುರುತ್ತದೆ. ಪ್ರತಿ ತಾಸಿನ ಅವಧಿಯಲ್ಲಿ ಒಂದು ಟ್ರಾಕ್ಟರ್ ಲೋಡ್ ಸಸ್ಯ ತ್ಯಾಜ್ಯವನ್ನು ಪುಡಿ ಮಾಡುವ ಸಾಮರ್ಥ್ಯ ಹೊಂದಿರುತ್ತದೆ. ತ್ಯಾಜ್ಯದಲ್ಲಿ ಶೇ. ಎರಡರಷ್ಟು ಪೊಟಾಷ್ ಇದ್ದು, ಸಾವಯವ ಇಂಗಾಲ ಹೆಚ್ಚು ಪ್ರಮಾಣದಲ್ಲಿ ದೊರೆಯುತ್ತದೆ ಎನ್ನಲಾಗಿದೆ. ಇದನ್ನು ತೋಟಗಳಲ್ಲಿ ಮುಚ್ಚಿಗೆಯಾಗಿ ಬಳಸಿದರೆ ಸದಾ ತೇವಾಂಶವಿದ್ದು, ಕಡಿಮೆ ನೀರಿನ ಬಳಕೆಯಾಗಿ ಮುಚ್ಚಿಗೆಯಲ್ಲಿ ಆಶ್ರಯ ಪಡೆದ ಉಪಯುಕ್ತ ಸೂಕ್ಷ್ಮಜೀವಿಗಳ ಚಟುವಟಿಕೆ ಹೆಚ್ಚಾಗುವುದರ ಜೊತೆಗೆ ಎರೆಹುಳುಗಳೂ ವೃದ್ಧಿಯಾಗುತ್ತವೆ. ಈ ಮೂಲಕ ಭೂಮಿಯ ಇಳುವರಿ ಕೂಡ ಹೆಚ್ಚಾಗುತ್ತದೆ, ಎನ್ನುವುದು ಮೃತ್ಯುಂಜಯಪ್ಪನವರ ಅನುಭವ. ಹಾಗೇ ಈ ಯಂತ್ರದಲ್ಲಿ ಕೋಕೋ ಕಾಯಿಯ ಹಸಿ ಸಿಪ್ಪೆ ಮತ್ತು ಅಡಿಕೆ ಸಿಪ್ಪೆಗಳನ್ನು ಪುಡಿ ಮಾಡಿ ದನಕರುಗಳಿಗೆ ಮೇವಾಗಿ ಉಪಯೋಗಿಸಬಹುದು. ಮತ್ತು ತೆಂಗಿನ ಕರಟನ್ನು ಪುಡಿ ಮಾಡಿ ಮುಚ್ಚಿಗೆಯಾಗಿ ಬಳಸಬಹುದು ಎನ್ನುತ್ತಾರೆ.

ಈಗಾಗಲೇ ಕರ್ನಾಟಕ ತೋಟಗಾರಿಕೆ ಇಲಾಖೆ ಈ ಯಂತ್ರ ಖರೀದಿಸಿ ಹಲವು ಜಿಲ್ಲೆಗಳಲ್ಲಿ ವಿತರಿಸಿರುತ್ತದೆ. ಈ ಯಂತ್ರದ ಬೆಲೆಯು 22,000 ರೂಗಳಾಗಿರುತ್ತದೆ. ಮೃತ್ಯುಂಜಯಪ್ಪನವರು ಇದುವರೆಗೂ ಇಂತಹ 100 ಕ್ಕೂ ಅಧಿಕ ಯಂತ್ರಗಳನ್ನು ತಯಾರಿಸಿಕೊಟ್ಟಿದ್ದಾರಂತೆ.

ಹೆಚ್ಚಿನ ಮಾಹಿತಿಗಾಗಿ: ಎನ್. ಮೃತ್ಯುಂಜಯಪ್ಪನವರನ್ನು, ಸಿ. ನಂದಿಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ -572117, ಮೊಬೈಲ್-9448970967 ಮೂಲಕ ಸಂಪರ್ಕಿಸಬಹುದಾಗಿದೆ.

ಸರಳ ಏಣಿ

ಅಡಿಕೆ ಮರಕ್ಕೆ ಕಾಳು ಮೆಣಸು, ವೀಳ್ಯದೆಲೆ ಬಳ್ಳಿಗಳನ್ನು ಹಬ್ಬಿಸಲು, ಸುಲಭವಾಗಿ ಬಳಸಬಲ್ಲ ಏಣಿ-ಪೈಪ್ ಏಣಿ. ಪಿ.ವಿ.ಸಿ. ಪೈಪ್‌ಗೆ ಒಂದೆರಡು ಅಡಿ ಅಂತರದಲ್ಲಿ ಹೆಜ್ಜೆಯಿಡಲು ಅನುಕೂಲವಾಗುವಂತೆ ಸಿಕ್ಕಿಸಿರುವ ಮೆಟ್ಟಿಲುಗಳು. ಮಹಿಳೆಯರೂ ಬಳಸಬಹುದಾದಂತಹ ಅತ್ಯಂತ ಸರಳ, ಉಪಕಾರಿ, ಬಿದಿರಿನ ಆಧುನಿಕ ಮಾರ್ಪಾಡು. ಈ ರೀತಿಯ ಏಣಿಗಳು ಮಲೆನಾಡಿನಲ್ಲಿ ಬಳಕೆಗೆ ಬರುತ್ತಿವೆ.



ಕೊಡಗಿನ ಮೋಹನ್ ಕುಮಾರರ ಮೂರು ಅನುಶೋಧನೆಗಳು

ಕೊಡಗಿನ ಶನಿವಾರ ಸಂತೆಯ ಸಮೀಪದಲ್ಲಿರುವ ಅಪ್ಪಶೆಟ್ಟಿಹಳ್ಳಿ ಗ್ರಾಮದ ಎ.ಡಿ. ಮೋಹನ್ ಕುಮಾರ್, ಬಿ.ಕಾಂ. ಪದವೀಧರರು. ಆದರೆ ನೌಕರಿಗಾಗಿ ಅಲೆದಾಡದೇ ಸ್ವಯಂ ಕೃಷಿಗೆ ಧುಮುಕಿದರು. ಹಾಗೆಯೇ ಉಪಕಸುಬಾಗಿ ಕೋಳಿ ಸಾಕಾಣಿಕೆ ಕೈಗೊಂಡರು. ಇವರ ಕೃಷಿಯ ಬದುಕಿನ ಅಗತ್ಯ ಅನಿವಾರ್ಯತೆಯಿಂದಾಗಿ ಕಸದಿಂದ ರಸ ತೆಗೆಯುವ ಸಾಹಸಕ್ಕೆ ಕೈ ಹಾಕುವಂತಾಯಿತು. ಪರಿಣಾಮವಾಗಿ ಗುಜರಿ ವಸ್ತುಗಳಿಂದ ಮೂರು ಬಗೆಯ ಸರಳವಾದ ಯಂತ್ರಗಳನ್ನು ತಯಾರಿಸಿದ್ದಾರೆ.

ನೀರೆತ್ತುವ ಯಂತ್ರ

ಹತ್ತಿರದ ಗುಜರಿ ಅಂಗಡಿಯಲ್ಲಿ ಬಿದ್ದಿದ್ದ ಒಂದು ಎಜ್‌ಡಿ ಬೈಕಿನ ಎಂಜಿನ್ ಕೊಂಡು, ಇದಕ್ಕೆ ಇತರೆ ಬಿಡಿ ಭಾಗಗಳನ್ನು ಸೇರಿಸಿದರು, ಪರಿಣಾಮ 3,500ರೂ. ವೆಚ್ಚದಲ್ಲಿ ನೀರೆತ್ತುವ ಯಂತ್ರ ಒಂದು ಸಿದ್ದವಾಯಿತು. ಇದನ್ನು ತಮ್ಮ ಜಮೀನಿನಲ್ಲಿ ಕೃಷಿಗೆ ನೀರು ಹರಿಸಲು ಬಳಸುತ್ತಿದ್ದಾರೆ. ಇದೇ ಯಂತ್ರಕ್ಕೆ 2 ರಿಂದ 3 ಸ್ಪ್ರಿಂಕ್ಲರ್ ಜೆಟ್ ಜೋಡಿಸಿ ಬಳಸುತ್ತಿದ್ದಾರೆ. ಯಂತ್ರಕ್ಕೆ ಒಂದು ಲೀಟರ್ ಸೀಮೆಎಣ್ಣೆ ಮತ್ತು ಕಾಲು ಲೀಟರ್ ಪೆಟ್ರೋಲ್ ಮಿಶ್ರ ಮಾಡಿ ಬಳಸಿದರೆ, ಪ್ರತಿ ಗಂಟೆಗೆ 30 ಸಾವಿರ ಲೀಟರ್ ನೀರೆತ್ತುತ್ತದೆ ಎನ್ನಲಾಗಿದೆ. ಇದರ ತಯಾರಿಕೆಯಲ್ಲಿ ಇವರ ಮಿತ್ರರಾದ ಅಕ್ಬರ್, ದಿಲೀಪ್, ಮತ್ತು ಜೀವನರು ಸಲಹೆ , ಸಹಾಯ ನೀಡಿರುತ್ತಾರೆ. ಇದನ್ನು ತಮ್ಮ ಕೃಷಿಯಲ್ಲಿ ನಾಲ್ಕೈದು ವರ್ಷಗಳಿಂದ ಬಳಸುತ್ತಿರುವುದಾಗಿ ಹೇಳಿದ್ದಾರೆ.

ಕಾಳು ಮೆಣಸು ಬೇರ್ಪಡಿಸುವ ಯಂತ್ರ

ಗೊಂಚಲಿನಲ್ಲಿರುವ ಕಾಳು ಮೆಣಸನ್ನು ಬಿಡಿಸಬೇಕಾದರೆ, ಅವುಗಳನ್ನು ಕಾಲಿನಿಂದ ತುಳಿಯಬೇಕು. ಇಲ್ಲವೇ ಕೂಲಿ ಆಳುಗಳಿಂದ ಮಾಡಿಸಬೇಕಾಗುತ್ತದೆ. ಇದರಿಂದ ಶ್ರಮವೂ ಹೆಚ್ಚು , ಖರ್ಚು ಕೂಡಾ ಜಾಸ್ತಿ. ಇಂದಿನ ದಿನಗಳಲ್ಲಿ ಕಾಳು ಮೆಣಸಿನ ಧಾರಣೆ ಕುಸಿಯುತ್ತಿದೆ. ಆದರೆ ಇದರ ಸಂಸ್ಕರಣೆಗೆ ತಗಲುವ ಖರ್ಚು ಹೆಚ್ಚಾಗಿರುತ್ತದೆ. ಇದನ್ನೆಲ್ಲಾ ಯೋಚಿಸಿ ಕಡಿಮೆ ಸಮಯದಲ್ಲಿ ಸಂಸ್ಕರಣೆ ಮಾಡುವಂಥ ಯಂತ್ರ ಒಂದನ್ನು ಮೋಹನ್ ಕುಮಾರ್ ತಯಾರಿಸಿದ್ದಾರೆ. ಈ ವಿಶಿಷ್ಟವಾದ ಯಂತ್ರವನ್ನು ವಿದ್ಯುತ್ ಶಕ್ತಿ ಸಹಾಯದಿಂದ, ಅದು ಇಲ್ಲದಿದ್ದರೆ ಕೈಯಿಂದಲೂ ಚಾಲನೆ ಮಾಡಬಹುದಾಗಿದೆ. ಇದರ ನಿರ್ಮಾಣಕ್ಕೆ ಕಬ್ಬಿಣದ ಬಲೆ, ಒಂದು ಎಚ್.ಪಿ. ವಿದ್ಯುತ್ ಮೋಟರ್ ಹಾಗೂ ಕಬ್ಬಿಣದ ಚೌಕಟ್ಟುಗಳನ್ನು ಬಳಸಿಕೊಳ್ಳಲಾಗಿದೆ. ಈ ಯಂತ್ರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿದರೆ ಗಂಟೆಗೆ 3 ರಿಂದ 4 ಕ್ವಿಂಟಾಲ್ ಅಥವಾ ಕೈಯಿಂದಲೇ ತಿರುಗಿಸಿದರೆ ಒಂದೂವರೆಯಿಂದ ಎರಡು ಕ್ವಿಂಟಾಲ್ ಕಾಳು ಮೆಣಸನ್ನು ಬೇರ್ಪಡಿಸಬಹುದು ಎನ್ನಲಾಗಿದೆ. ನಾಲ್ಕು ವರ್ಷಗಳಿಂದ ಇಬ್ಬರು ಕೃಷಿಕರು ಇದನ್ನು ಉಪಯೋಗಿಸುತ್ತಿದ್ದಾರೆ. ಈ ಯಂತ್ರದಿಂದ ಹಸಿ ಮತ್ತು ಒಣಗಿದ ಕಾಳುಗಳನ್ನು ಬಿಡಿಸುವ ಜೊತೆಗೆ ಧೂಳು, ಕಡ್ಡಿಯನ್ನು ನಿವಾರಿಸಿ ಸ್ವಚ್ಛಗೊಳಿಸ ಬಹುದಾಗಿದೆ. ಅಲ್ಲದೆ ಬೇರೆಡೆಗೆ ಬೇಕಾದರೂ ಸುಲಭವಾಗಿ ಸಾಗಿಸಬಹುದು. ಈ ಯಂತ್ರಕ್ಕೆ ರೂ.13,000 ಖರ್ಚು ತಗಲುತ್ತದೆ ಎಂದು ಮೋಹನ್ ಕುಮಾರ್ ತಿಳಿಸಿದ್ದಾರೆ.



ಕೋಳಿ ಪುಕ್ಕ ಸ್ವಚ್ಛಗೊಳಿಸುವ ಸಾಧನ

ಮೋಹನ್ ಕುಮಾರ್ ಕೋಳಿ ಅಂಗಡಿಯೊಂದನ್ನು ತೆರೆದಿರುತ್ತಾರೆ. ಇಲ್ಲಿ ಕೋಳಿಯ ಗರಿಗಳನ್ನು ತೆಗೆದು ಸ್ವಚ್ಛಗೊಳಿಸುವ ಕೆಲಸ ಸ್ವಲ್ಪ ಕಷ್ಟಕರವಾಗಿತ್ತು. ಇದಕ್ಕೆ ಮಾರುಕಟ್ಟೆಯಲ್ಲಿ ದೊರೆಯುವ ಯಂತ್ರ ದುಬಾರಿ. ಹಾಗಾಗಿ ಸುಲಭ, ಸರಳವಾದ ಕೋಳಿಪುಕ್ಕ ಸ್ವಚ್ಛಗೊಳಿಸುವ ಯಂತ್ರ ತಯಾರಿಸುವ ಆಲೋಚನೆ ಇವರಿಗೆ ಬಂತು. ಈ ಯಂತ್ರಕ್ಕೆ ಅವರು ಒಂದು ಸ್ಟೀಲ್ ಹಂಡೆ, ಆಟೋ ಹೌಜಿಂಗ್, ಸೈಕಲ್ ಫ್ರಿವ್ಹೀಲ್, ಮೋಟಾರ್ ಸೈಕಲ್ ಚೈನ್, ವಾಹನಗಳ ಕೆಲವು ಬಿಡಿ ಭಾಗಗಳು ಹಾಗೂ 60 ರಿಂದ 70 ರಬ್ಬರ್ ಬುಷ್‌ಗಳನ್ನು ಅಳವಡಿಸಿದ್ದಾರೆ. ಇದಕ್ಕೆ 4 ರಿಂದ 5 ಸಾವಿರ ರೂಪಾಯಿ ಖರ್ಚು ತಗಲುತ್ತದೆ ಎನ್ನುತ್ತಾರೆ. ಇದನ್ನು ಕೈ ಚಾಲಿತವಾಗಿಯೂ ಮತ್ತು ಬೇಕಾದಲ್ಲಿ ಒಂದು ಎಚ್.ಪಿ. ವಿದ್ಯುತ್ ಮೋಟಾರ್‌ನ್ನು ಅಳವಡಿಸಿಕೊಳ್ಳುವ ವ್ಯವಸ್ಥೆ ಮಾಡಿದ್ದು, ಇದನ್ನೇ ತಮ್ಮ ಕೋಳಿ ಮಾಂಸದ ಅಂಗಡಿಯಲ್ಲಿ ಉಪಯೋಗಿಸುತ್ತಿದ್ದಾರೆ. ಇದರೊಳಗೆ ಒಂದು ಅಥವಾ ಎರಡು ಕೋಳಿಗಳನ್ನು ಹಾಕಿ ಹ್ಯಾಂಡಲ್ ತಿರುಗಿಸಿದರೆ, ಒಂದು ನಿಮಿಷಾರ್ಧದಲ್ಲಿ ಸ್ವಚ್ಛವೆನ್ನುವರು. ಈ ಯಂತ್ರವನ್ನು ಬೇಕಾದಲ್ಲಿಗೆ ಸುಲಭವಾಗಿ ಸಾಗಣೆ ಮಾಡಬಹುದು. ಹತ್ತು ಜನ ಮಾಡುವ ಕೆಲಸವನ್ನು ಈ ಯಂತ್ರದ ಮುಖಾಂತರ ಒಬ್ಬರೇ ನಿರ್ವಹಿಸಬಹುದು. ಹಾಗೂ ಈ ಯಂತ್ರವನ್ನು ಈಗಾಗಲೇ 6 ಜನರು ಬಳಸುತ್ತಿರುವುದಾಗಿ ತಿಳಿಸಿದ್ದಾರೆ. ಈ ಮೂರು ಯಂತ್ರಗಳ ಅನುಕೂಲ ಪಡೆಯುವ ಆಸಕ್ತರು. *ಎ.ಡಿ. ಮೋಹನ್ ಕುಮಾರ್, ಅಪ್ಪಶೆಟ್ಟಿಹಳ್ಳಿ ಗ್ರಾಮ, ಶನಿವಾರ ಸಂತೆ ಅಂಚೆ, ಸೋಮವಾರ ಪೇಟೆ ತಾಲ್ಲೂಕು, ಕೊಡಗು ಜಿಲ್ಲೆ, ಮೊಬೈಲ್ : 9448919518 ಗೆ ಸಂಪರ್ಕಿಸಬಹುದು.*



ಸಂಗಣ್ಣನವರ ಹಬ್ಬು ನೀರೆತ್ತುವ ಯಂತ್ರ


ಗುಲ್ಬರ್ಗ ಜಿಲ್ಲೆಯ, ಮುದನೂರು ಗ್ರಾಮದ ಶ್ರೀ ಸಂಗಣ್ಣ ಹಬ್ಬು ರವರು ಕೃಷಿಕರು. ಪ್ರೌಢಶಾಲೆಯವರೆಗಿನ ವಿದ್ಯೆ ಇವರದು. ವ್ಯವಸಾಯದ ಜೊತೆಗೆ ಟಿ.ವಿ, ರೇಡಿಯೋ, ವಾಚ್ ಹೀಗೆ ಸಣ್ಣ ಪುಟ್ಟ ಯಂತ್ರ ರಿಪೇರಿ ಮಾಡುವ ಹವ್ಯಾಸ ಇವರಿಗಿತ್ತು. ಈಗ ತಮ್ಮದೇ ಆದ ವರ್ಕ್ ಶಾಪ್‌ವೊಂದನ್ನು ಹೊಂದಿದ್ದಾರೆ. ಇವರು ತಮ್ಮ ಎಂಟು ಎಕರೆಯ ಜಮೀನಿಗೆ ನೀರು ಹಾಯಿಸಲು ಡೀಸಲ್ ಅಥವಾ ವಿದ್ಯುತ್ ಇಂಧನ ಬೇಡದ ನೀರೆತ್ತುವ ಯಂತ್ರವೊಂದನ್ನು ಸಂಶೋಧಿಸಿದ್ದಾರೆ. ಈ ಯಂತ್ರವನ್ನು ಹರಿಯುವ ನೀರಿನಲ್ಲಿ ಅಳವಡಿಸಿದರೆ 10 ಹೆಚ್.ಪಿ ಯಂತ್ರದಷ್ಟು ನೀರನ್ನು 40 ಅಡಿ ಎತ್ತರಕ್ಕೆ ಎತ್ತಿ ಒಗೆಯುತ್ತದೆಯಂತೆ. ಈ ಯಂತ್ರ ಬೃಹತ್ ಗಾತ್ರದ ಯಂತ್ರದಂತಿದ್ದು ಅದರೊಳಗೆ ಸಣ್ಣ ಗೇಟ್ ಮತ್ತು ಟರ್ಬೈನ್ ವಿನ್ಯಾಸ ರಚಿಸಲಾಗಿದೆ. ನೀರು ಈ ಯಂತ್ರದ ಮೂಲಕ ಸಾಗಿದಾಗ ಟರ್ಬೈನ್ ತಿರುಗಲು ಆರಂಭಿಸುತ್ತದೆ. ಆಗ ಟರ್ಬೈನ್‌ಗೆ ಜೋಡಿಸಿರುವ ಫ್ಯಾನ್ ತಿರುಗುತ್ತಾ, ನಿರಂತರವಾಗಿ ನೀರೆತ್ತಲು ಶುರುಮಾಡುತ್ತದೆ. 2005ರಲ್ಲಿ ಆರಂಭಿಸಿ, ಮೂರು ವರ್ಷಗಳ ನಿರಂತರ ಪ್ರಯತ್ನದಿಂದ ಈ ಯಂತ್ರವನ್ನು ಸಿದ್ದಗೊಳಿಸಿದ್ದಾರೆ. ತಮ್ಮ ಹೊಲದಲ್ಲಿ 12 ಎಕರೆ ಭೂಮಿಗೆ ಕೃಷ್ಣಾ ಮೇಲ್ದಂಡೆ ನೀರನ್ನು ಈ ಯಂತ್ರದ ಮೂಲಕವೇ ಹಾಯಿಸುತ್ತಿರುವರು. ಹಿಂದೆ ನೀರು ಏರಿನಲ್ಲಿರುವ ತಮ್ಮ ಹೊಲದ ಕೊನೆಯವರೆಗೂ ಬರುವುದು ಕಷ್ಟವಾಗಿತ್ತು. ಈಗ ಆ ಸಮಸ್ಯೆ ದೂರವಾಗಿದೆ ಎನ್ನುತ್ತಾರೆ. ಭತ್ತಕ್ಕೆ ಸದಾ ನೀರು ಬೇಕಾಗಿರುವುದರಿಂದ ಅಲ್ಲಿ ಇಂತಹ ಯಂತ್ರಕ್ಕೆ ಬಹಳ ಬೇಡಿಕೆ ಇದೆ ಎನ್ನುತ್ತಾರೆ. ಇದುವರೆಗೆ ಎರಡೂವರೆ ಅಂಗುಲದಿಂದ ಆರು ಅಂಗುಲದವರೆಗೆ ನೀರು ಹಾಯಿಸುವ ನಾಲ್ಕು ಮಾದರಿಯನ್ನು ತಯಾರಿಸಿದ್ದು, ನಾಲ್ಕು ಅಂಗುಲದ ನೀರೆತ್ತುವ ಯಂತ್ರವನ್ನು ಕೇಳಿ ಖರೀದಿಸಲು ಸುತ್ತಮುತ್ತಲಿನ 50 ಕ್ಕೂ ಹೆಚ್ಚು ರೈತರು ಮುಂದೆ ಬಂದಿರುವರಂತೆ. ಅಹ್ಮದಾಬಾದಿನ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನ, ಹಬ್ಬುರವರ ಈ ಯಂತ್ರದ ಮೇಲೆ ಆಸಕ್ತಿ ತೋರಿ ಒಂದು ಮಾದರಿಯನ್ನು ತಯಾರಿಸಿ ಕೊಡಲು ಕೇಳಿರುತ್ತದೆ. ಯಂತ್ರವೊಂದಕ್ಕೆ 60 ಸಾವಿರ ರೂ ಖರ್ಚು ತಗಲುತ್ತದೆ ಎನ್ನುವರು. ಇದಕ್ಕೆ "ಹಬ್ಬು ವಾಟರ್ ಲಿಫ್ಟರ್" ಎಂದು ಈಗಾಗಲೇ ನಾಮಕರಣ ಮಾಡಿರುತ್ತಾರೆ. ಇದರ ಮೇಲೆ ಪೇಟೆಂಟ್ ಪಡೆಯುವ ಬಯಕೆ ಕೂಡ ಇವರಿಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಶ್ರೀ ಸಂಗಣ್ಣ ಜಿ. ಹಬ್ಬು, ಮುದನೂರು ಅಂಚೆ, ಸುರುಪುರ ತಾಲ್ಲೂಕು ,ಗುಲ್ಬರ್ಗಾ ಜಿಲ್ಲೆ-585216, ಮೊಬೈಲ್-9449618726.

ನಿಸ್ರಾಣಿ ಶ್ರೀಧರರ ಯಜ್‌ಡಿ ಟಿಲ್ಲರ್

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಶ್ರೀಧರ್ ಆಚಾರ್ ರವರು ಎಸ್.ಎಸ್.ಎಲ್.ಸಿ ವರೆಗೆ ಓದಿದ್ದು ವೃತ್ತಿಯಲ್ಲಿ ಕಮ್ಮಾರರು. ಇವರು ತಮ್ಮ ಊರಾದ ನಿಸ್ರಾಣಿಯಲ್ಲಿ ವೆಲ್ಡಿಂಗ್ ಶಾಪ್‌ನ್ನು ಹೊಂದಿದ್ದಾರೆ, ಜೊತೆಗೆ ತಮ್ಮ ಎರಡು ಎಕರೆ ಜಮೀನಿನಲ್ಲಿ ಬೆಳೆ ಬೆಳೆಯುವ ಹಂಬಲ ಕೂಡ. ಉಳುಮೆಗೆ ಎತ್ತುಗಳು ಸಿಗುತ್ತಿಲ್ಲ, ಸಿಕ್ಕರೂ ದುಬಾರಿ. ಆದಕಾರಣ ಶ್ರೀಧರರಿಗೆ ಏನಾದರೂ ಪರ್ಯಾಯ ಕಂಡು ಕೊಳ್ಳಬೇಕೆಂಬ ಆಲೋಚನೆ. ಒಂದು ಸಲ ತಮ್ಮ ಬೈಕ್ ಮೇಲೆ ಬೇಲಿಗಾಗಿ ಮುಳ್ಳನ್ನು ಹೇರಿ ಎಳೆದುಕೊಂಡು ಬರುತ್ತಿರುವಾಗ ಆ ಮುಳ್ಳುಗಳು ಮಣ್ಣನ್ನು ತರಚಿಕೊಂಡು ಉಳುಮೆ ಮಾಡಿ ಬರುವುದನ್ನು ಗಮನಿಸಿದರು. ಈ ಘಟನೆಯೇ ಅವರಿಗೆ ಯಜ್‌ಡಿ ಬೈಕ್ ಮೂಲಕ ಉಳುಮೆ ಮಾಡುವ ಟಿಲ್ಲರ್ ಅನುಶೋಧನೆಗೆ ಪ್ರೇರೇಪಿಸಿತು. ತಕ್ಷಣ ಹಳೆಯ ಯಜ್‌ಡಿ ಬೈಕೊಂದನ್ನು ಗುಜರಿಯಿಂದ ಖರೀದಿಸಿ ಅದಕ್ಕೆ ಮಾರ್ಪಾಡು ಮಾಡಿ ತಮ್ಮ ಕನಸಿನ ಯಜ್‌ಡಿ ಟಿಲ್ಲರ್ ರೂಪಿಸಲು ಮುಂದಾದರು.

ಮೊದಲು ಪವರ್ ಟಿಲ್ಲರ್‌ನ ಮಾದರಿಯಲ್ಲಿ ಕಬ್ಬಿಣದ ಗಾಲಿ, ಜಿಐ ಪೈಪ್‌ನ ಹ್ಯಾಂಡಲ್ ಹಾಗೂ ಎಂಜಿನ್ ಕೂಡಿಸುವ ಜಾಗವನ್ನು ವ್ಯವಸ್ಥಿತ ರೀತಿಯಲ್ಲಿ ವೆಲ್ಡಿಂಗ್ ಮಾಡಿಕೊಂಡರು.ನಂತರ ಯಜ್‌ಡಿ ಬೈಕಿನ ಎಂಜಿನನ್ನು ಅದಕ್ಕೆ ಅಳವಡಿಸಿದರು. ಎಂಜಿನ್ ಹಾಗೂ ಗಾಲಿಗೆ ಮಧ್ಯೆ ಚೈನ್ ಜೋಡಿಸಿದರು. ಇಂಧನಕ್ಕೆ ಟ್ಯಾಂಕ್ ಬದಲು ಪ್ಲಾಸ್ಟಿಕ್ ಕ್ಯಾನ್ ಅಳವಡಿಕೆ. ಇದನ್ನು ಸ್ಟಾರ್ಟ್ ಮಾಡಲು ಮಾತ್ರ ಪೆಟ್ರೋಲ್ ಬಳಸಿ ಆ ಮೇಲೆ ಸೀಮೆಎಣ್ಣೆ ಹಾಕಿಕೊಳ್ಳಲು ಯೋಚಿಸಿದರು. ಒಂದು ಎಕರೆ ಉಳುಮೆ ಮಾಡಲು 4 ಲೀಟರ್ ಸೀಮೆಎಣ್ಣೆ ಬೇಕಾಗುತ್ತದೆಯಂತೆ. ಕಳೆದ ನಾಲ್ಕು ವರ್ಷಗಳಿಂದ ಅವರು ತಮ್ಮ ಜೋಳ, ಹತ್ತಿ, ಶೇಂಗಾ, ಹೊಲಗಳನ್ನು ಇದರಲ್ಲೇ ಉಳುಮೆ ಮಾಡುತ್ತಿದ್ದಾರೆ. ಕುಂಟೆ, ಸಾಲು ಹಾಗೂ ಸಮತಟ್ಟು ಮಾಡಲು ಇದನ್ನು ಉಪಯೋಗಿಸುತ್ತಿದ್ದಾರೆ. ಈ ಯಜ್‌ಡಿ ಟಿಲ್ಲರ್ ತಯಾರಿಸಲು ಶ್ರೀಧರವರಿಗೆ ಎಂಟು ಸಾವಿರ ರೂಗಳು ಖರ್ಚಾಗಿವೆಯಂತೆ.



ಈಗ ಅವರು ಐದು ಹೆಚ್.ಪಿ. ಟಿಲ್ಲರ್ ಸಂಶೋಧನೆ ಮಾಡಿದ್ದು ಇದನ್ನು ಗದ್ದೆ ನಾಟಿಗೂ ಬಳಸುವ ಆಲೋಚನೆಯಂತೆ. ಇದರ ಅನುಕೂಲ ಬಯಸಿ ಈಗಾಗಲೇ ಸುತ್ತ ಮುತ್ತಲಿನ ರೈತರಿಂದ 50 ಕ್ಕೂ ಅಧಿಕ ಬೇಡಿಕೆ ಬಂದಿರುತ್ತದೆ. ಈ ರೀತಿ 5 ಹೆಚ್.ಪಿ. ಎಂಜಿನ್ ಟಿಲ್ಲರ್‌ವೊಂದನ್ನು ತಯಾರಿಸಲು ಎರಡು ತಿಂಗಳು ಸಮಯಬೇಕಾಗಿದ್ದು 20,000 ರೂಗಳು ಖರ್ಚಾಗುತ್ತದೆ ಎಂದು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ: ಶ್ರೀಧರ್ ಆಚಾರ್ ರವರನ್ನು ನಿಸ್ರಾಣಿ ಅಂಚೆ, ಸೊರಬ ತಾಲೂಕು, ಶಿವಮೊಗ್ಗ ಜಿಲ್ಲೆ , ಫೋನ್ : 08184-263157 ಮೂಲಕ ಸಂಪರ್ಕಿಸಬಹುದು.


ವಿಶೇಷ ಸೂಚನೆ

- ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸ ಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.
- ರೈತರು ಮೊದಲು ತಾಂತ್ರಿಕ ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.
- ಇಲ್ಲಿ ಪ್ರಕಟಿಸಿರುವ ಪದ್ಧತಿ ಮತ್ತು ತಂತ್ರಜ್ಞಾನಗಳ ಬಳಕೆಯಲ್ಲಿ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ 'ಹಿತ್ತಲಗಿಡ' ಜವಾಬ್ದಾರಿಯಲ್ಲ.

-- ಸಂಪಾದಕ

ಕಬ್ಬಿನ ಸಿಪ್ಪೆಯ ಜೈವಿಕ ಅನಿಲದ ಘಟಕ

ಹಾಸನ ಜಿಲ್ಲೆ ಬೇಲೂರು ತಾಲೂಕು ತುರುಕರುಹಳ್ಳಿಯ ಶ್ರೀ ಸಿದ್ದರಾಮ ಅವರು ಆಲೆಮನೆಯಲ್ಲಿ ಬರುವ ಕಬ್ಬಿನ ಸಿಪ್ಪೆಯಿಂದ ಜೈವಿಕ ಅನಿಲ ತಯಾರಿಸುವ ಘಟಕ ಒಂದನ್ನು ಸಂಶೋಧಿಸಿದ್ದಾರೆ. ಇವರ ಮನೆಯಲ್ಲಿ ಎರಡು ಘನ ಮೀಟರಿನ ಸಗಣಿಯ ಅನಿಲ ಘಟಕ ಇದೆ. ಇದರಲ್ಲಿ ಕಬ್ಬಿನ ಸಿಪ್ಪೆಯ ಪ್ರಯೋಗ ನಡೆಸಲಾಯಿತು. ಇದರಿಂದ ಫಲಿತಾಂಶ ಕಂಡು ಬಂತು. ಈ ವಿಚಾರವನ್ನು ಮೈಸೂರು ಆಕಾಶವಾಣಿ ಕೃಷಿರಂಗ ವಿಭಾಗದ ಡಾ.ಎನ್.ಕೇಶವಮೂರ್ತಿ ಯವರಲ್ಲಿ ತಿಳಿಸಲಾಯಿತು. ಇವರು ಘಟಕದ ಮಾದರಿ ತಯಾರಿಸಿ ಇದರಿಂದ ವೈಜ್ಞಾನಿಕ ವಿವರ ತಿಳಿಯುವಂತೆ ಹೇಳಿದರು. ಹಾಗೆಯೇ ಮಂಡ್ಯ ಜಿಲ್ಲೆಯಲ್ಲಿರು



ಕಾವೇರಿ ಹೈಟೆಕ್ ಜಾಗರಿ ಇಂಡಸ್ಟ್ರೀಸ್ ಮಾಲೀಕರಾದ ಶ್ರೀ ರಾಮಕೃಷ್ಣಪ್ಪ ನವರಲ್ಲಿ ಈ ಸಂಶೋಧನೆಯ ಬಗ್ಗೆ ಮಾತು ಕತೆ ಯಾಡಿದರು. ರಾಮ ಕೃಷ್ಣಪ್ಪನವರು ತಮ್ಮ ಬೆಲ್ಲದ ಇಂಡಸ್ಟ್ರೀಸ್‌ನಲ್ಲಿ ಮಾದರಿ ಘಟಕ ತಯಾರಿಸಲು ಆಹ್ವಾನ ನೀಡಿದರು. ಮೈಸೂರಿನಲ್ಲಿರುವ ಎನ್.ಐ.ಇ. ಎಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕರಾದ ಡಿ.ಎನ್. ಹರ್ಷರವರು ಈ ಪ್ರಯೋಗದ ನೇತೃತ್ವವಹಿಸಿದರು. ಇಲ್ಲಿ ಬಗೆಬಗೆಯ ವಿನ್ಯಾಸಗಳ ಘಟಕವನ್ನು ನಿರ್ಮಿಸಿ 25 ಕಿಲೋ ಕಬ್ಬಿನ ಸಿಪ್ಪೆಯಿಂದ ಪ್ರಯೋಗ ನಡೆಸಿ ವಿವರ ದಾಖಲಿಸಲಾಯಿತು.

ಜೈವಿಕ ಅನಿಲ ಘಟಕದ ಗಾತ್ರ	:	150 ಘನ ಮೀಟರ್
ಹೊರಬರುವ ದ್ರವ್ಯ ಪ್ರಮಾಣ	:	ದಿನಕ್ಕೆ 3000 ಕಿಲೋ ಗ್ರಾಂ
ಜೈವಿಕ ಅನಿಲ ಉತ್ಪಾದನೆ	:	120 ಘನ ಮೀಟರ್/ದಿನಕ್ಕೆ
ವಾರ್ಷಿಕ ಅನಿಲ ಉತ್ಪಾದನೆ	:	43,800ಘನ ಮೀಟರ್
ಘಟಕದ ಆಯುಷ್ಯ	:	25 ವರ್ಷ
ಅನಿಲ ಸಂಗ್ರಾಹಕದ ಆಯುಷ್ಯ	:	10 – 12 ವರ್ಷ
ಸ್ಥಾಪನಾ ವೆಚ್ಚ	:	5,50,000 ರೂ
ವಾರ್ಷಿಕ ಶ್ರಮ	:	1,02,200 ರೂ
ನಿರ್ವಹಣೆ ವೆಚ್ಚ	:	30,660 ರೂ
ವಾರ್ಷಿಕ ಆದಾಯ		
ಜೈವಿಕ ಅನಿಲ ಮೌಲ್ಯ	:	5,08,080 ರೂ
ಸಾವಯವ ಗೊಬ್ಬರ	:	3,65,000 ರೂ
ಒಟ್ಟು	:	8,73,080 ರೂ.

ಹೀಗೆ ಘಟಕಕ್ಕೆ ಮಾಡಿದ ಖರ್ಚು ಒಂದೇ ವರ್ಷದಲ್ಲಿ ಹಿಂದಕ್ಕೆ ಬರುವ ಸಾಧ್ಯತೆಯಿದೆ. ಹಾಲು ಹಿಂಡಿದ ಕಬ್ಬಿನ ಸಿಪ್ಪೆಯನ್ನು ಈಗ ಆಲೆಮನೆಗಳಲ್ಲಿ ಬೆಲ್ಲ ತಯಾರಿಕೆಗೆ ಬೆಂಕಿ ಹಾಕಲು ಉಪಯೋಗಿಸುತ್ತಾರೆ. ಅಥವಾ ಸುಮ್ಮನೇ ಸುಟ್ಟುಬಿಡುತ್ತಾರೆ. ಅದರ ಬದಲು ಕಬ್ಬು ನುರಿಯಲು ಬಳಸುವ ಯಂತ್ರ ಚಾಲನೆಗೆ ಡೀಸಲ್ ಬದಲು ಜೈವಿಕ ಅನಿಲವನ್ನೇ ಬಳಸಬಹುದು. ಕಡಿಮೆ ಕೆಲಸಗಾರರು ಸಾಕು. ಆಲೆಮನೆಯಲ್ಲಿ ಬೆಲ್ಲ ಉತ್ಪಾದನೆಗೆ ಕಟ್ಟಿಗೆ ಬೆಂಕಿ ಹಾಕುವ ಬದಲು ಜೈವಿಕ ಅನಿಲ ಉಪಯೋಗಿಸಿದರೆ ಪರಿಸರ ನಾಶ ತಪ್ಪಿದಂತಾಗುತ್ತದೆ.

ಹೆಚ್ಚಿನ ಮಾಹಿತಿಗೆ ಡಿ.ಎನ್. ಹರ್ಷ (ಮೊ. 9945051194) ಅಥವಾ ಸಿದ್ಧರಾಮುಗೌಡ (ದೂರವಾಣಿ : 080-23620025) ಇವರನ್ನು ಸಂಪರ್ಕಿಸಬಹುದು.

ಕೇನ್- ಓ-ಲಾ-ತಾಜಾ ಕಬ್ಬಿನ ಹಾಲು

ಕಬ್ಬಿನ ಹಾಲು ನೈಸರ್ಗಿಕವಾಗಿ ಅಧಿಕ ಶಕ್ತಿ ಹೊಂದಿರುವ ಪಾನೀಯ. ಇದು ಜ್ವರ, ಮೂತ್ರ ಅವ್ಯವಸ್ಥೆ, ಹಳದಿ ರೋಗ ಮುಂತಾದುವುಗಳನ್ನು ಶಮನಗೊಳಿಸುತ್ತದೆ. ಹಾಗೂ ತಕ್ಷಣ ಚೈತನ್ಯವನ್ನು ತುಂಬಿಕೊಡುವ ಸಾಮರ್ಥ್ಯ ಕಬ್ಬಿನ ಹಾಲಿಗಿದೆ. ಆದರೆ ಕಬ್ಬಿನ ಹಾಲು ಅರೆಯುವ ಅಂಗಡಿಗಳ ಕೊಳಕು ಪರಿಸರ, ಅಲ್ಲಿಯೇ ಕಸದ ರಾಶಿ, ತೊಳೆಯದ ಲೋಟಗಳು, ದಾರಿ ಬದಿಯಲ್ಲಿ ಮಣ್ಣಿನಲ್ಲೇ ಪೇರಿಸಿಟ್ಟ ಕಬ್ಬಿನ ಜಲ್ಲೆ, ಗುಂಯಿಗುಡುವ ಸಾವಿರಾರು ನೊಣಗಳ ಸಂತೆ ನೋಡಿದರೆ ವಾಕರಿಕೆ ಬರುತ್ತದೆ. ಇದಕ್ಕೆ ಪರಿಹಾರವಾಗಿ ಬೆಂಗಳೂರಿನ ಜಿ. ಶ್ರೀನಿವಾಸರಾವ್‌ರವರು 'ಕೇನ್-ಓ-ಲಾ' ಎಂಬ ಉದ್ದಿಮೆ ಮೂಲಕ ತಾಜಾ ಮತ್ತು ಆರೋಗ್ಯ ಪೂರ್ಣ ಕಬ್ಬಿನಹಾಲನ್ನು ಗ್ರಾಹಕರಿಗೆ ಸುವ್ಯವಸ್ಥಿತವಾಗಿ ನೀಡುವ ಒಂದು ದಿಟ್ಟ ಹೆಜ್ಜೆ ಇಟ್ಟಿರುತ್ತಾರೆ. ಇಲ್ಲಿ ಕೃಷಿಕರ ಹೊಲಗಳಿಂದ ತಾಜಾ ಕಬ್ಬನ್ನು ತಂದು ಸ್ವಚ್ಛಗೊಳಿಸಿ ಅತ್ಯಂತ ಆಧುನಿಕ ಯಂತ್ರಗಳನ್ನು ಬಳಸಿ ಹಾಲು ತೆಗೆದು ಗ್ರಾಹಕರಿಗೆ ಒದಗಿಸ ಲಾಗುತ್ತದೆ. ಮೊದಲ ಕೇಂದ್ರ ಬೆಂಗಳೂರಿನ ಜಯನಗರದ ನಿರ್ಮಲ ಪರಿಸರದಲ್ಲಿ ಆರಂಭವಾಗಿದೆ. ಇಲ್ಲಿ ಬೇಸಿಗೆಯಲ್ಲಿ ಐಸ್ ಹಾಕಿದ ತಂಪು ಹಾಲು ದೊರೆತರೆ, ಚಳಿಗಾಲದಲ್ಲಿ ಕಾಳು ಮೆಣಸು, ಶುಂಠಿ ಹಾಕಿದ ಔಷಧೀಯ ಕಬ್ಬಿನ ಹಾಲು, ನಿಂಬೆ ರಸ ಸೇರಿಸಿದ ಹಾಗೂ ವಿವಿಧ ರುಚಿಯ ಕಬ್ಬಿನ ಹಾಲು ಲಭ್ಯ. ಕಬ್ಬಿನ ಹಾಲಿನ ಕ್ರಾಂತಿಯ ಹರಿಕಾರ ಜಿ.ಶ್ರೀನಿವಾಸರಾವ್ ಕರ್ನಾಟಕ ರಾಜ್ಯಾದ್ಯಂತ 500 ಕೇಂದ್ರ ಪ್ರಾರಂಭಿಸುವ ಗುರಿ ಹೊಂದಿರುತ್ತಾರೆ.

ಹೀಗೆ, ಕೇನ್-ಓ-ಲಾ ನೂರಾರು ಮಂದಿಗೆ ಕಡಿಮೆ ಬಂಡವಾಳ ಅವಶ್ಯವಿರುವ ಉದ್ಯೋಗ ನೀಡಬಹುದಾಗಿರುತ್ತದೆ. ಘಟಕ ಸ್ಥಾಪಿಸಲು ಸಣ್ಣ ಸ್ಥಳ ಸಾಕು. ಹಾಲು ಹಿಂಡುವ ಯಂತ್ರವನ್ನು ಕೇನ್-ಓ-ಲಾ ಒದಗಿಸುತ್ತದೆ. ಮಾರ್ಗದರ್ಶನ ನೀಡುತ್ತದೆ. ಕಬ್ಬು, ಐಸ್ ಸರಬರಾಜು ಮಾಡುತ್ತದೆ. ಆಸಕ್ತಿ ಇರುವವರು ಸಂಪರ್ಕಿಸಬೇಕಾದ ವಿಳಾಸ : ಕೇನ್ -ಓ-ಲಾ ಫುಡ್ಸ್ ಪ್ರೈವೇಟ್ ಲಿಮಿಟೆಡ್, ನಂ. 70, 21 ನೇ ಎ ಮುಖ್ಯ ರಸ್ತೆ, ಜೆ.ಪಿ. ನಗರ, 2ನೇ ಹಂತ, ಬೆಂಗಳೂರು -560 070 , ಫೋನ್ -22977777. *ಮೂಲ: ಕೃಷಿ ವೈಭವ, ಜೂನ್ 2007.*

ಟೆಂಡರ್ ಫ್ರೆಶ್-ತಾಜಾ ಎಳನೀರು

ಕೃಷಿ ಕುಟುಂಬ ವರ್ಗದ ಇಬ್ಬರು ತರುಣರಾದ ಶ್ರವಣಬೆಳಗೊಳದ ಹೊಸಹಳ್ಳಿಯ ಯೋಗೇಶ್ ಮತ್ತು ತಿಪಟೂರಿನ ಸರ್ವೇಶ್ ಕುಮಾರ್ ಬೆಂಗಳೂರಿನಲ್ಲಿ ತಾಜಾ ಎಳನೀರು ಸರಬರಾಜಿನ 'ಟೆಂಡರ್ ಫ್ರೆಶ್' ಉದ್ದಿಮೆ ಯನ್ನು ತೆರೆದಿರುತ್ತಾರೆ. ಎಳನೀರಿನಂತಹ ನಮ್ಮ ಒಂದು ಅದ್ಭುತ ಆರೋಗ್ಯಕರ ಪೇಯ ಇನ್ನೂ ಫುಟ್‌ಪಾತ್ ಸರಕಾಗಿಯೇ ಉಳಿದಿದೆ. ಕಾರ್ಪೋರೇಟ್ ಕಚೇರಿಗಳೊಳಗೆ ಅದಕ್ಕೆ ಪ್ರವೇಶವಿಲ್ಲ. ಅದನ್ನು ಅಲ್ಲಿ ಕೆತ್ತಲು, ಒಡೆಯಲು ಅನುಮತಿ ಕೊಡುವುದಿಲ್ಲ. ಹಣ್ಣಿನ ರಸ, ಟೆಟ್ರಾಪ್ಯಾಕ್ ಪೇಯಗಳಂತೆ ಇದನ್ನೂ ಕೊಡಲು ಸಾಧ್ಯ ಎನ್ನುವ ಯೋಚನೆಯೇ ಟೆಂಡರ್ ಫ್ರೆಷ್ ಸಂಸ್ಥೆ ತೆರೆಯಲು ಕಾರಣವಾಯಿತು.

ಸಿಪ್ಪೆತೆಗೆದ ಎಳನೀರು 'ಟೆಂಡರ್ ಫ್ರೆಷ್' ಕೋಣೆಯ ಮಾಮೂಲು ವಾತಾವರಣದಲ್ಲಿ ಆರೇಳು ದಿನ ಬಣ್ಣಗೆಡದೆ ಉಳಿದರೆ, ಫ್ರಿಜ್‌ನೊಳಗಿರಿಸಿದರೆ ಮೂರು ವಾರ ತಾಳಿಕೊಳ್ಳಬಹುದು. ಸಿಪ್ಪೆ ಕೆತ್ತಿದ ಎಳನೀರನ್ನು ಪೊಟ್ಯಾಸಿಯಂ ಮೆಟಾಬೈಸಲ್ಫೇಟ್ ಮತ್ತು ಸಿಟ್ರಿಕ್ ಆಮ್ಲದ ದ್ರಾವಣದಲ್ಲಿ ಅದ್ದಿ, ಅದರ ಅಂದ ಚಂದಕ್ಕೆ ತೆಳುವಾದ ಬನಿಯನ್ ಸುತ್ತುತ್ತಾರೆ. ಉದ್ಯಾನನಗರಿಯನ್ನು ಆಳುವ ಸಾಫ್ಟ್‌ವೇರ್ ಉದ್ಯೋಗಿಗಳೇ ಇದರ ಮುಖ್ಯ ಗ್ರಾಹಕವರ್ಗ. ಇದರ ಖಾಯಂ ಗಿರಾಕಿಗಳು ಅಕ್ಸೆಂಚರ್, ಇನ್ಫೋಸಿಸ್, ಐಬಿಎಂ, ಹನಿವೆಲ್, ವಿಪ್ರೋ ಇತ್ಯಾದಿ ಅಂತರರಾಷ್ಟ್ರೀಯ ಕಂಪನಿಗಳಾಗಿರುವುದರಿಂದ ಮಾರುಕಟ್ಟೆ ಗಟ್ಟಿಯಾಗಿರುತ್ತದೆ. ಟೆಂಡರ್ ಫ್ರೆಶ್‌ವೊಂದರ ಬೆಲೆ 12 ರೂ ಆಗಿರುತ್ತದೆ. ಎಳನೀರು ಬಳಸಿದ ಬಳಿಕ ಉಳಿಯುವ ಖಾಲಿ ಕರಟನ್ನು ವಾಪಾಸು ಪಡೆದು ಒಣಗಿಸಿ ಬೇರೆ ಉದ್ದೇಶಗಳಿಗೆ ಬಳಸುತ್ತಾರೆ. ಈ ಉದ್ದಿಮೆಯನ್ನು ಇನ್ನೂ ಅಭಿವೃದ್ಧಿಗೊಳಿಸುವುದರಿಂದ ಎಳನೀರಿಗೆ ಬೇಡಿಕೆ ಅಧಿಕವಾಗಿ ರೈತರಿಗೂ ಅನುಕೂಲವಾಗಲಿದೆ.

ಮೂಲ:- ಅಡಿಕೆ ಪತ್ರಿಕೆ ಅಕ್ಟೋಬರ್ 2006

ಹತ್ತಿಯಲ್ಲಿ ಕೀಟಾಣುಗಳ ನಿಯಂತ್ರಣ

ಗುಜರಾತಿನ ಭಾವನಗರದ ನರನ್ ಭಾಯಿ ಶಾಮ್‌ಜಿ ಭಾಯಿ ಸಾಲಂಕಿಯವರು ಕೃಷಿಕರಾಗಿದ್ದು, ಮೂರನೇ ತರಗತಿಯವರೆಗೆ ಓದಿದ್ದಾರೆ. ತಮ್ಮ 4 ಎಕರೆಯ ಭೂಮಿಯಲ್ಲಿ ಹತ್ತಿ, ಶೇಂಗಾ, ಮೆಣಸಿನ ಕಾಯಿ, ಜೋಳ, ನವಣೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ನರನ್ ಭಾಯಿಯವರು ತಾವು ಬೆಳೆದಿರುವ ಹತ್ತಿ ಬೆಳೆಯ ಕೀಟ ಬಾಧೆಗೆ ಗಿಡ-ಮೂಲಿಕೆಗಳ ಕಷಾಯ ಒಂದನ್ನು ತಯಾರಿಸಿರುತ್ತಾರೆ.

ಈ ಕಷಾಯವನ್ನು ತಯಾರಿಸಲು ಅವರು ಮೊದಲು ಲೋಳೆಸರ, ಸೀತಾಫಲದ ಎಲೆ, ಬೇವಿನ ಒಳಗಿನ ತೊಗಟೆ, ಹಸಿ ಮೆಣಸಿನಕಾಯಿ ಮತ್ತು ನುಗ್ಗೆ ಬೇರು ಇವುಗಳನ್ನು ನೀರಿನಲ್ಲಿ ಕುದಿಸುತ್ತಾರೆ. ತಣ್ಣಗಾದ ಮೇಲೆ ಇದನ್ನು ಸೋಸಿ ನೀರಿನೊಂದಿಗೆ ಮಿಶ್ರ ಮಾಡಿ ಬೆಳೆಗೆ ಸಿಂಪಡಿಸುವರು. ಇದರ ಉಪಯೋಗದಿಂದ ಒಳ್ಳೆಯ ಗುಣ ಮಟ್ಟದ ಹತ್ತಿಯನ್ನು ಪಡೆಯುವುದರ ಜೊತೆಗೆ ಕೀಟಾಣುಗಳ ನಿಯಂತ್ರಣ ವನ್ನು ಮಾಡಬಹುದು ಎನ್ನಲಾಗಿದೆ. ಈ ಕಷಾಯವನ್ನು ತಿಂಗಳಿಗೆ 2-3 ಸಲ ಉಪಯೋಗಿಸಬೇಕಾಗುತ್ತದೆ.

ಮೆಕ್ಕೆ ಜೋಳದಲ್ಲಿ ಕೀಟ ನಿಯಂತ್ರಣ

95 ವರ್ಷದ ರೂಪ್‌ಜಿ ಭಾಯಿ ಕಾಲುಭಾಯಿ ವಾಸವಾ ಗುಜರಾತಿನ ವಾಲಿಯ ತಾಲೂಕಿನವರು. ಮೆಕ್ಕೆ ಜೋಳದ ಬೆಳೆಯಲ್ಲಿ ಕಂಡು ಬರುವ ಹುಚ್ಚು ಮಲ್ಲಿಗೆ ಹುಳ (*blister beetle*) ಕೀಟದ ಹಾವಳಿ ತಡೆಯುವಲ್ಲಿ ತಮ್ಮದೇ ಆದ ಒಂದು ಕ್ರಮ ಅನುಸರಿಸು ತ್ತಿರುವರು. ರೂಫ್‌ಜಿ ಭಾಯಿಯವರು ಎಡತಿಗೆಯ (*combretumo valifolium*) ಎರಡು-ಮೂರು ಎಲೆಗಳಲ್ಲಿ 3 ಅಥವಾ 4 ಈ ಹುಚ್ಚು ಮಲ್ಲಿಗೆ ಕೀಟಗಳನ್ನು ಸೇರಿಸಿ ಅರೆಯುವರು. ಇದರಿಂದ ಒಂದು ರೀತಿಯ ಕೆಟ್ಟ ವಾಸನೆಯ ದ್ರಾವಣ ತಯಾರಾಗುತ್ತದೆ. ಈ ವಾಸನೆಯ ದ್ರಾವಣವನ್ನು ಹಿಡಿದು ಗಾಳಿ ಬೀಸುವ ಕಡೆಯಿಂದ ಸಾಗಿದರೆ ಉಳಿದ ಕೀಟಗಳು ಹಿಮ್ಮೆಟ್ಟುತ್ತವೆ. ಇದೇ ರೀತಿ ಪದೇ ಪದೇ ಮಾಡುತ್ತಿದ್ದರೆ ಈ ಕೀಟ ಬಾಧೆ ಸಂಪೂರ್ಣ ಕಡಿಮೆಯಾಗುತ್ತದೆ ಎನ್ನುವುದನ್ನು ರಾಜುಭಾಯಿ ಸ್ವಯಂ ಪ್ರಯೋಗಿಸಿ ತೋರಿಸಿರುವರು. ಈ ಪದ್ಧತಿಯನ್ನು ಸುತ್ತಮುತ್ತಲ ಕೆಲ ರೈತರು ಅನುಸರಿಸುತ್ತಿರುವುದಾಗಿ ಅವರು ಹೇಳಿರುವರು.

ಬೆಳೆಗಳಲ್ಲಿ ಕೀಟಬಾಧೆಗೆ 'ಕಮಾಲ್ 505'

ಹರಿಯಾಣ ರಾಜ್ಯದ ಈಶ್ವರ್ ಸಿಂಗ್ ಗಿಡ -ಮೂಲಿಕೆಗಳ ಕಷಾಯ ಒಂದನ್ನು ತಯಾರಿಸಿದ್ದು, ಇದನ್ನು ಜೈವಿಕ ಗೊಬ್ಬರವಾಗಿ, ಮಣ್ಣಿನ ಫಲವತ್ತತೆಗಾಗಿ ಹಾಗೂ ಹಲವಾರು ರೀತಿಯ ಬೆಳೆಗಳಲ್ಲಿನ ಕೀಟ ಮತ್ತು ರೋಗ ಬಾಧೆಗಳ ಹತೋಟಿಗೆ ಬಳಸುತ್ತಿದ್ದಾರೆ.

ಮೊದಲು ಇವರು ಬೇವಿನ ಎಲೆಗಳನ್ನು ನೀರಿನಲ್ಲಿ ಕುದಿಸಿ, ನಂತರ ಬರುವ ಕಷಾಯವನ್ನು ಬೆಳೆಗಳಿಗೆ ಸಿಂಪಡಿಸುತ್ತಿದ್ದರು. ಈ ಕಷಾಯಕ್ಕೆ ಅವರು ಬೇವಿನ ಎಣ್ಣೆ ಮಿಶ್ರಣ ಮಾಡಿದರು ಹಾಗೂ ಉತ್ತಮ ಫಲಿತಾಂಶ ಕಂಡು ಕೊಂಡರು.

ಈ ಕಷಾಯವನ್ನು ಇನ್ನೂ ಉತ್ತಮಗೊಳಿಸಲು ಅವರು ಬೇವಿನ ಎಲೆಗಳೊಂದಿಗೆ ಬೇವಿನ ಎಣ್ಣೆ, ನೆಲಬೇವು,ಬೆಲ್ಲ ಹಾಗೂ ಕೆಲ ಸ್ಥಳೀಯ ವಾಗಿ ದೊರಕುವ ಗಿಡ ಮೂಲಿಕೆಗಳನ್ನು ಬಳಸಿದ್ದಾರೆ. ಇವುಗಳ ಮಿಶ್ರಣವನ್ನು ಮಡಿಕೆಯಲ್ಲಿ ಗೋ-ಮೂತ್ರದೊಂದಿಗೆ 15 ದಿನಗಳವರೆಗೆ ಕೊಳೆ ಹಾಕುತ್ತಾರೆ. ನಂತರ ಬರುವ ಕಷಾಯವನ್ನು ಸೋಸಿ ಒಂದು ಲೀಟರ್‌ಗೆ 100 ಲೀಟರ್ ನೀರನ್ನು ಸೇರಿಸಿ ಬೆಳೆಗಳಿಗೆ ಸಿಂಪಡಿಸುವರು. ಈ ಕಷಾಯಕ್ಕೆ ಅವರು 'ಕಮಾಲ್ 505' ಎಂದು ಹೆಸರಿಸಿದ್ದಾರೆ. ಇದರಿಂದ ಎಲ್ಲಾ ರೀತಿಯ ಕ್ರಿಮಿ ಕೀಟಗಳು ನಾಶವಾಗುವುದಲ್ಲದೇ ಕಷಾಯವು ಬೆಳೆಗಳ ಮೇಲೆ ಅಂಟಿರುವುದರಿಂದ ಪ್ರಾಣಿಗಳು ಬೆಳೆಗಳನ್ನು ತಿನ್ನುವುದಿಲ್ಲ ವೆನ್ನುತ್ತಾರೆ.

(ಈ ಮೇಲಿನ ಅನುಶೋಧನೆಗಳಿಗೆ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ 4 ನೇ ಸುತ್ತಿನ ಸ್ಪರ್ಧೆಯಲ್ಲಿ ಸಮಾಧಾನಕರ ಬಹುಮಾನ ದೊರೆತಿರುತ್ತದೆ.)

ಬೂದು ರೋಗ ನಿಯಂತ್ರಣ

ಗುಜರಾತಿನ ಥೋಟಿಯಾಲ ತಾಲೂಕು ಸುರೇಂದ್ರ ನಗರದ ಕೃಷಿಕರಾದ ದೇವ್‌ಜಿ ಬಾಯಿ ಜೆರಮ್ ಬಾಯಿಯವರು ತಮ್ಮ ಬೆಳೆಯಲ್ಲಿ ಬರುವ ಬೂದು ರೋಗ ತಡೆಯಲು ವಿಶಿಷ್ಠ ಔಷಧಿ ಒಂದನ್ನು ಕಂಡು ಕೊಂಡಿದ್ದಾರೆ. ಮೊದಲಿಗೆ ನವಣೆ ಹಿಟ್ಟನ್ನು ಹತ್ತು ದಿನಗಳವರೆಗೆ ಕೊಳೆಸುತ್ತಾರೆ. ನಂತರ ರಸವನ್ನು ಸೋಸಿ ನೀರಿನಲ್ಲಿ ಸೇರಿಸಿ ಬೂದು ರೋಗದ ಗಿಡಗಳಿಗೆ ಸಿಂಪಡಿಸುತ್ತಾರೆ. ಇದರಿಂದ ಶೇಕಡಾ 60 ಕ್ಕೂ ಹೆಚ್ಚು ರೋಗ ನಿಯಂತ್ರಣವಾಗಿರುತ್ತದೆಯಂತೆ. ಅಲ್ಲದೆ ಗಿಡಗಳ ಹೂವು, ಎಲೆ, ಉದುರುವುದು ಕಡಿಮೆಯಾಗುತ್ತದೆ ಎನ್ನ ಲಾಗಿದೆ. ಇದರಿಂದ ಇಳುವರಿ ಉತ್ತಮವಾಗಿದೆ ಎನ್ನುವ ದೇವ್‌ಜಿ ಬಾಯಿ ಇದನ್ನು ತಮ್ಮ ತಂದೆಯವರಿಂದ ಕಲಿತಿದ್ದು ಎನ್ನುತ್ತಾರೆ. ತಮ್ಮ ಹಳ್ಳಿಯಲ್ಲಿನ ಇತರ ಕೆಲ ರೈತರೂ ಕೂಡ ಇದನ್ನೇ ಅನುಸರಿಸು ತ್ತಿರುವುದಾಗಿ ಹೇಳುತ್ತಾರೆ.

(ಈ ಅನುಶೋಧಕರನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ 4 ನೇ ಸುತ್ತಿನ ಸ್ಪರ್ಧೆಯಲ್ಲಿ ಗೌರವಿಸಲಾಗಿದೆ.)

ದ್ವಿದಳ ಧಾನ್ಯ ಸಂರಕ್ಷಣೆ

ಸುಣ್ಣದ ಪುಡಿಯನ್ನು ದ್ವಿದಳ ಧಾನ್ಯಗಳಿಗೆ ಮಿಶ್ರಣ ಮಾಡುವುದರಿಂದ ಕೀಟ ಬಾಧೆ ಇರುವುದಿಲ್ಲ. ಹಾಗೆಯೇ ನಾಟಿ ಹಸುಗಳ ಸಗಣಿಯನ್ನು ಬೆರಣಿ ಮಾಡಿ, ಈ ಬೆರಣಿಯ ಪುಡಿಯನ್ನು ಧಾನ್ಯಗಳಿಗೆ ಮಿಶ್ರಣ ಮಾಡುವುದರಿಂದ ಕೀಟ ಬಾಧೆ ನಿಯಂತ್ರಿಸಬಹುದೆನ್ನುತ್ತಾರೆ ಹಾಸನದ ಸಂತೆಶಿವರ ಬಸವರಾಜುರವರು.

ಹಿತ್ತಲಗಿಡದ ಇದುವರೆಗಿನ ಬಹುತೇಕ ಹಳೆ ಸಂಚಿಕೆಗಳು ಲಭ್ಯವಿರುತ್ತವೆ. ರೂ. 600/- ಪಾವತಿ ಮಾಡಿ ಪಡೆದು ಕೊಳ್ಳಬಹುದು. ಆಸಕ್ತರು ಮನಿ ಆರ್ಡರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ವಿಶ್ವ ಗೋ ಸಮ್ಮೇಳನ

ಏಪ್ರಿಲ್ 2007 ರ 21 ರಿಂದ 29 ರವರಗೆ ಶಿವಮೊಗ್ಗದ ಹೊಸ ನಗರದ ಶ್ರೀರಾಮಚಂದ್ರಾಪುರ ಮಠದಲ್ಲಿ ಜಾಗತಿಕ ಹಬ್ಬದ ರೀತಿಯ ವಿಶ್ವ ಗೋ ಸಮ್ಮೇಳನ ನಡೆದಿರುತ್ತದೆ. ಕರ್ನಾಟಕದ ಈ ಮೂಲೆಯ ಹಳ್ಳಿಯೆಡೆಗೆ ದೇಶ ವಿದೇಶಗಳಿಂದ ಪ್ರಬಂಧ ಮಂಡನೆಗಾಗಿ, ಭಾರತದ ದೇಶೀ ಗೋ ತಳಿಗಳ ಬಗ್ಗೆ ಚರ್ಚೆಗಾಗಿ ಬಂದ ಪರಿಣತರು, "ಸ್ವಾಮಿಗಳು ಸಮ್ಮೇಳನ ನಡೆಸುತ್ತಿದ್ದಾರಂತೆ, ಅನೇಕ ಹಸು ತಳಿಗಳು ಇದ್ದಾವಂತೆ ನೋಡಿ ಬರೋಣ" ಎಂದು ಹೊರಟ ಸ್ಥಳೀಯ ಜನರು, ಒಟ್ಟಾರೆ ಹಬ್ಬದ ವಾತಾವರಣ.

ಮಠದ ವಿಸ್ತಾರ ಪ್ರದೇಶದ ಹೆಬ್ಬಾಗಿಲ ದ್ವಾರದಿಂದ ಹಿಡಿದು ಸಮ್ಮೇಳನ ನಡೆಯುವ ಜಾಗದಲ್ಲೆಲ್ಲಾ ಹಸುವಿನ ಮೂರ್ತಿಗಳು, ಹಸುವಿನ ಮೂರ್ತಿಯಿರುವ ಕಂಬಗಳು. ಸಮ್ಮೇಳನ ನಡೆಯುವ ವೇದಿಕೆಯ ಮೇಲೆ ಕೂಡಾ ಒಂದು ಜೀವಂತ ದೇಸಿ ಹಸು. ಸ್ಥಳೀಯ ಗೋವಂಶಗಳ ಮಹಿಮೆಯನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಯೋಜಿಸಲಾಗಿದ್ದ ಸಮ್ಮೇಳನ ಅದು. ಸಮ್ಮೇಳನದ ಮುಖ್ಯ ರೂವಾರಿ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಯವರು. ಶ್ರೀ ಶಂಕರಾ ಚಾರ್ಯರಿಂದ ಸ್ಥಾಪನೆಗೊಂಡ ರಾಮಚಂದ್ರಾಪುರ ಮಠದ ಪ್ರಸಕ್ತ ಪೀಠಾಧಿಪತಿಗಳು ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಯವರು. "ಕಾಮದುಘಾ" ಎನ್ನುವುದು ಸ್ವಾಮಿಗಳ ಸಂಕಲ್ಪ, ಗೋವಂಶಗಳನ್ನು ಉಳಿಸುವ ಯೋಜನೆ.

ವಿಶ್ವ ಗೋ ಸಮ್ಮೇಳನ ಜಾತಿ-ಮತ- ಜನಾಂಗೀಯ ಭಾವಗಳನ್ನು ಮೀರಿ ನಿಂತಿತ್ತು. ಸಮ್ಮೇಳನದ ವ್ಯವಸ್ಥೆಗಾಗಿ ಸ್ವಯಂ ಸೇವಕರ ಪಡೆಯೇ ಸಿದ್ದವಾಗಿತ್ತು. ಪ್ರತಿ ನಿತ್ಯವೂ ಬರುವ ಸಾವಿರಾರು ಜನರಿಗೆ ಉಳಿದುಕೊಳ್ಳುವ, ಊಟ ಉಪಹಾರದ ವ್ಯವಸ್ಥೆ. ಚಿಂತನೆಗಾಗಿ ಗೋಷ್ಠಿಗಳು, ಭಾಷಣಗಳು. ಇನ್ನೊಂದೆಡೆ ಹಲವಾರು ಗೋ ತಳಿಗಳಿಗೆ ಸಂಬಂಧಿಸಿದ ಪರಿಕರಗಳ ಪ್ರದರ್ಶನ. ಎಲ್ಲಿ ನೋಡಿದರಲ್ಲಿ ಗೋ ವಂಶದ ಚಿತ್ರಗಳು, ಶಿಲ್ಪಗಳು, ಕವಿತೆಗಳು, ಗವ್ಯ ಚಿಕಿತ್ಸಾ ತಜ್ಞರಿಂದ ಪ್ರತಿದಿನ ವಿಭಿನ್ನ ರೋಗಗಳಿಗೆ ಚಿಕಿತ್ಸಾ ಶಿಬಿರ. ವೇದಿಕೆಯ ಮೇಲಿದ್ದಷ್ಟೇ ಹೊರಗೂ ಜಿಜ್ಞಾಸೆ. ನೈಜ ಗೋಮಾತೆಗೆ ರಥೋತ್ಸವ ಕೂಡಾ ಇತ್ತು. ಗೋಮಾತೆಯ ಅಖಂಡ ಭಜನೆ, ಗೋಪಿಕಾ ವನದಲ್ಲಿ ಕೊಳಲು ವಾದನ, ನೃತ್ಯಗಳು ಸಮ್ಮೇಳನದ ಅವಿಭಾಜ್ಯ ಅಂಗವಾಗಿದ್ದವು. ಇದು ವಿಶ್ವ ಗೋ ಸಮ್ಮೇಳನದ ಸಂಕ್ಷಿಪ್ತ ಚಿತ್ರಣ.

ಭಾರತದಲ್ಲಿ ಹಸು ಕೇವಲ ಒಂದು ಪ್ರಾಣಿಯಲ್ಲ; ಗೋ ಮಾತೆ, ಕಾಮಧೇನು. ಬರೀ ಹಾಲಿಗಾಗಿ ಗೋವನ್ನು ಸಾಕುವುದಿಲ್ಲ, ಗೋವು ಕೃಷಿಗೆ ಆಧಾರ. ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಮಾತ್ರ ವಲ್ಲ; ಗೋ ಮೂತ್ರ, ಗೋ ಮಯ ಕೂಡಾ ಅಷ್ಟೇ ಉಪಯುಕ್ತ. ಸ್ಥಳೀಯ ಹವಾಮಾನ ವೈಪರೀತ್ಯಗಳಿಗೆ ಹೊಂದಿಕೊಂಡು ಬಂದಿರುವ ದೇಶೀಯ ತಳಿಗಳನ್ನು ವಿವಿಧ ಪ್ರಾಂತ್ಯಗಳಿಂದ ಹುಡುಕಿ ತಂದು ಸಂರಕ್ಷಿಸುವ ಕಾರ್ಯ ರಾಮಚಂದ್ರಾಪುರ ಮಠದಲ್ಲಿ ನಡೆಯುತ್ತಿದೆ. ಕಾಮಧೇನುವಾಗಿರುವ ಗೋವುಗಳನ್ನು ಮುದಿಯಾದೊಡೆ ಕಟುಕರಿಗೆ ಮಾರದಿರಿ ಎನ್ನುವುದು ಸ್ವಾಮಿಗಳ ಕಳಕಳಿಯ ಮನವಿ.

ಕೃಷಿ ಸಂಬಂಧಿತ ಪಾರಂಪರಿಕ ಜ್ಞಾನ ಅತ್ಯಗತ್ಯ

ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯ ಗ್ರಾಮೀಣ ಅಧ್ಯಯನ ಕೇಂದ್ರ, ಮಣಿಪಾಲ, ಗ್ರಾಮಾಂತರ ಸಮುದಾಯ ವಿಜ್ಞಾನ ಕೇಂದ್ರ, ಶೆಡ್ತಿಕೆರೆ, ರೈತಾಪಿ 'ಫಾರ್ಮರ್ಸ್ ಕ್ಲಬ್' ಇವರ ಸಂಯುಕ್ತ ಆಶ್ರಯದಲ್ಲಿ ಕೃಷಿ ಸಂಬಂಧಿ ಪಾರಂಪರಿಕರ ಜ್ಞಾನ ವಿನಿಮಯ ಕಾರ್ಯಗಾರ ಹೆಗ್ಗೋಡಿನ ನೀನಾಸಂ ಸಭಾಂಗಣದಲ್ಲಿ ನಡೆಯಿತು. ಈ ಕಾರ್ಯಾಗಾರ ದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಿದ್ದರು. ವಿಜ್ಞಾನ ಕೇಂದ್ರದ ಪ್ರಧಾನ ಕಾರ್ಯದರ್ಶಿ ಶ್ರೀ ಕವಲ ಕೋಡು ಕೆ. ವೆಂಕಟೇಶ ಎಲ್ಲಾ ರೈತರನ್ನು ಸ್ವಾಗತಿಸಿ, ನಾಗೇಂದ್ರ ಸಂಚಾಲಕರು ರೈತಾಪಿ ಫಾರ್ಮರ್ಸ್ ಕ್ಲಬ್ ವಂದಿಸಿದರು. ಸಭೆಯ ಅಧ್ಯಕ್ಷತೆಯನ್ನು ಕೆ.ವಿ. ಅಕ್ಷರ, ರಂಗ ಕರ್ಮಿಗಳು, ನೀನಾಸಂ ವಹಿಸಿದ್ದರು.

ಚಿಂತಕ ಶ್ರೀ ಲಕ್ಷ್ಮೀಶ ತೊಳ್ಪಾಡಿ ಗ್ರಾಮೀಣ ಬದುಕಿನ ಸಾರ್ಥಕತೆ ಬಗ್ಗೆ ಮಾತನಾಡಿದ್ದು ಹೀಗೆ. "ದೇಶದಾದ್ಯಂತ ಕೃಷಿ ವಲಯವು ಬಿಕ್ಕಟ್ಟಿನಿಂದ ಕೂಡಿದೆ. ಮನುಷ್ಯರಂತೆ ಸಸ್ಯಗಳೂ ಜೊತೆ ಜೊತೆಯಾಗಿ ಬಾಳಿ ಬದುಕಲು ಇಷ್ಟಪಡುತ್ತವೆ. ನಮ್ಮ ರೈತರು ತಮ್ಮ ತಮ್ಮ ಹೊಲಗಳಲ್ಲಿ , ತೋಟಗಳಲ್ಲಿ ತಮ್ಮದೇ ಆದ ಪಾರಂಪರಿಕ ಜ್ಞಾನದಿಂದ ಅನೇಕ ಆವಿಷ್ಕಾರಗಳನ್ನು ಮಾಡಿ ಕೃಷಿಯನ್ನು ಜೀವನೋಪಾಯಕ್ಕಾಗಿ ಅಳವಡಿಸಿಕೊಂಡಿದ್ದಾರೆ. ಅನೇಕರು ಕೃಷಿ ತಂತ್ರಜ್ಞಾನದ ಬಾವುಟಗಳನ್ನು ತಮ್ಮ ಮನೆಯಲ್ಲಿ ಹಾರಿಸಿರುವರು. ಅನೇಕ ಮಹನೀಯ ಕೃಷಿಕರು ತಾವು ಕಂಡು ಹಿಡಿದ ಕೃಷಿ ಸಂಬಂಧ ಜ್ಞಾನವನ್ನು ತಮ್ಮಲ್ಲಿ ರೂಢಿಸಿಕೊಂಡು ಬರುತ್ತಿದ್ದಾರೆ. ಅವರಿಗೆ ಸರ್ಕಾರದ ಸಹಾಯವಿಲ್ಲ, ಅವರ ಜ್ಞಾನವನ್ನು ದಾಖಲೆ ಸಹ ಮಾಡಿಲ್ಲ. ಇದರಿಂದ ಒಂದು ದಿನ ಯಾವುದಾದರೂ ಬಹುರಾಷ್ಟ್ರೀಯ ಕಂಪನಿ ಇದು ತನ್ನದೇ ಆವಿಷ್ಕಾರ ಎಂದು ಪೇಟೆಂಟ್ ಮಾಡಿ ಕೃಷಿಯಲ್ಲಿ ತಾವು ಅದ್ಭುತ ಕಂಡು ಕೊಂಡಿದ್ದೇವೆ ಎಂದು ಪ್ರತಿಪಾದಿಸಿ ಪತ್ರಿಕೆಗಳಲ್ಲಿ ಪ್ರಚಾರ ಮಾಡಿಕೊಂಡರೆ ನಿಜವಾದ ಪಾರಂಪರಿಕ ಜ್ಞಾನ ಕೃಷಿ ಮಾಡಿದವನಿಗೆ ಅನ್ಯಾಯವಾಗುತ್ತದೆ. ಉದಾ : ಮಲ್ಲಿಗೆ ಗಿಡ ಸವರುವಿಕೆಗೆ ಕುರಿಗಳ ಬಳಕೆ, ಇಲಿಗಳ ಹತೋಟಿ, ನಾಟಿ ಸೊಳ್ಳೆ ಬತ್ತಿ , ಬತ್ತದ ಗದ್ದೆಯಲ್ಲಿ ಏಡಿ ನಿಯಂತ್ರಣ, ಮೆಣಸಿನ ರೋಗಕ್ಕೆ ಸಾವಯವ ರೋಗನಾಶಕ, ಸೀತಾಫಲದಿಂದ ಜಾನುವಾರುಗಳ ಗಾಯದ ಹುಳು ನಿಯಂತ್ರಣ, ದನಗಳ ಕೊಂಬು ಮುರಿತಕ್ಕೆ ಚಿಕಿತ್ಸೆ ಇತ್ಯಾದಿ. ಇಂತಹ ಕೃಷಿ ಸಂಬಂಧಿ ಪಾರಂಪರಿಕ ಜ್ಞಾನ ಅತ್ಯಗತ್ಯ. ಜೊತೆಗೆ ಇಂತಹ ಜ್ಞಾನ ವಿನಿಮಯವನ್ನು ರೈತರೊಡನೆ ನಡೆಸಬೇಕು, ಇದನ್ನು ನಮ್ಮಲ್ಲೆ ಉಳಿಸಿಕೊಳ್ಳಬೇಕು," ಎಂದು ತಿಳಿಸಿದರು.


(ವಿ.ಸೂ : ಹಿತ್ತಲಗಿಡ ಪತ್ರಿಕೆ ಕಳೆದ 13 ವರ್ಷಗಳಿಂದ ಈ ಎಲ್ಲಾ ವಿಚಾರಗಳನ್ನು ಕೈಗೆತ್ತಿಕೊಂಡು ಮುಂದುವರೆಯುತ್ತಿದೆ. ಇದನ್ನು ಮತ್ತಷ್ಟು ಗಟ್ಟಿ ಮಾಡಲು ತಮ್ಮೆಲ್ಲರ ಸಹಾಯ ಅತ್ಯಗತ್ಯ - ಸಂಪಾದಕ).

ಉಸಿರಾಟದ ನಿವಾರಣೆಗೆ

ತಮಿಳುನಾಡು ರಾಜ್ಯದ ಪೊನ್ನುಸ್ವಾಮಿ ಎಂಬುವವರು ನಾಟಿ ವೈದ್ಯರು. ಇವರು ಕಳೆದ ನಲವತ್ತು ವರ್ಷಗಳಿಂದ ಈ ವೈದ್ಯ ವೃತ್ತಿಯನ್ನು ಮಾಡುತ್ತಿದ್ದಾರೆ. ಇವರಿಗೆ ಯಾವುದೇ ಹೊಸ ಸಸ್ಯ ಕಂಡ ಕೂಡಲೇ ಅದರ ಗುಣ ಧರ್ಮ, ಉಪಯೋಗಗಳನ್ನು ಪರೀಕ್ಷಿಸುವುದು ಒಂದು ರೀತಿಯ ಹವ್ಯಾಸ. 1977 ರಲ್ಲಿ ಹಾರ್ಟಸೀಡ್ *(Cardiospermum helicacabum L)* ಕನ್ನಡದಲ್ಲಿ ಎರುಂಬಳ್ಳಿ, ಅಗ್ನಿ ಬಳ್ಳಿ, ಮಿಂಚು ಬಳ್ಳಿ, ಎಂದು ಕರೆಯಲ್ಪಡುತ್ತಿರುವ ಸಸ್ಯ ಉಪಯೋಗಿಸಿ ಗಾಯ ನಿವಾರಣೆ ಮಾಡಲು ಪರೀಕ್ಷೆ ನಡೆಸಿದರು. ಆ ಸಮಯದಲ್ಲಿ ಪೊನ್ನು ಸ್ವಾಮಿ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದರು. ತಮ್ಮ ಶ್ವಾಸ ಕೋಶದ ಭಾಗಕ್ಕೆ ಹಾರ್ಟಸೀಡ್ ಮಿಶ್ರಣವನ್ನು ಹಚ್ಚಿದರು. ಇದರ ಪರಿಣಾಮವಾಗಿ ಕೆಲವೇ ಗಂಟೆಗಳಲ್ಲಿ ಅವರು ಸರಿಯಾಗಿ ಉಸಿರಾಡುವಂತಾದರು. ಇದನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಲು ಪೊನ್ನುಸ್ವಾಮಿ ತಮ್ಮ ಪ್ರಯೋಗವನ್ನು ಮುಂದುವರೆಸುತ್ತಿರುವರು.

ಮಲೇರಿಯಾ ನಿವಾರಣೆಗೆ

ಒರಿಸ್ಸಾ ರಾಜ್ಯದ ಜಾಗ್ ಪಟೇಲ್ ಮಲೇರಿಯಾ ಕಾಯಿಲೆಯನ್ನು ತಡೆಯಲು ಒಂದು ಹೊಸ ಕಷಾಯವನ್ನು ಕಂಡು ಹಿಡಿದಿದ್ದಾರೆ. ಬಿಳಿಕೇಪಲ *(Ixora undulata Roxb.)*, ನೆಲಬೇವು *(Andrographis Paniculata)*, ಪರಿಜಾತ ಇವುಗಳ ಎಲೆಗಳು, ಬೇವಿನ ತೊಗಟೆ, ರಾಮುಗುಳ್ಳ *(Solanum xanthocarpum Schrad)*, ಗಿಡದ ಬೇರು ಮತ್ತು ಕಾಂಡ ಎಲ್ಲವುಗಳನ್ನು 20 ಗ್ರಾಂ ನಷ್ಟು ತೆಗೆದುಕೊಂಡು ನೀರಿನಲ್ಲಿ ಬೇಯಿಸಿ ತಣಿಯಲು ಬಿಡುವರು. ಸೋಸಿದ ಕಷಾಯ ವನ್ನು ಬೆಳಿಗ್ಗೆ 50 ಗ್ರಾಂ ನಷ್ಟು ಖಾಲಿ ಹೊಟ್ಟೆಗೆ 15 ದಿನ ಗಳವರೆಗೆ ತೆಗೆದುಕೊಂಡರೆ, ಮಲೇರಿಯಾ ರೋಗದಿಂದ ಗುಣಮುಖವಾಗಬಹುದೆಂದು ಪಟೇಲರು ಹೇಳುತ್ತಾರೆ.



ಮೂಲ: ಹನಿಬೀ vol 17(4) 18(1) ಅಕ್ಟೋಬರ್ – ಡಿಸೆಂಬರ್ 2006 ಮತ್ತು ಜನವರಿ – ಮಾರ್ಚ್ 2007.

ತಲೆನೋವಿನ ಬಳ್ಳಿ

ಈ ಬಳ್ಳಿ ಔಷಧೀಯ ಗುಣವನ್ನು ತನ್ನ ಹೆಸರಿನ ಮೂಲಕವೇ ಸೂಚಿಸುವಂತಿದೆ. ಇದರ ಹಸಿ ಬೇರನ್ನು ಜಜ್ಜಿ , ಬರುವಂಥ ನವಿರಾದ ಪರಿಮಳವನ್ನು ಆಘ್ರಾಣಿಸಿದರೆ ಬಿಗಿದ ನರಗಳನ್ನು ಸಡಿಲಿಸಬಲ್ಲ ಆಹ್ಲಾದಕರ ಎನಿಸುವಂತಹ ವಾಸನೆ ಬರುತ್ತದೆ. ಹೀಗಾಗಿ ಒತ್ತಡ, ಆಯಾಸ, ಅತಿಯಾಗಿ ಕಾಣಿಸಿಕೊಳ್ಳುವ ತಲೆನೋವಿನ ಬೇರೆ ಬೇರೆ ರೂಪಗಳಿಗೆ ತಲೆನೋವಿನ ಬಳ್ಳಿ ಸುಲಭದ ಮದ್ದಾಗಿದೆ. ಇದು ತುಮಕೂರು ಜಿಲ್ಲೆಯ ದೇವರಾಯನ ದುರ್ಗದ ಮತ್ತು ಚಿತ್ರದುರ್ಗದ ಉದುರೆಲೆ ಕಾಡುಗಳಲ್ಲಿ ವ್ಯಾಪಕವಾಗಿ ಕಂಡು ಬರುತ್ತದೆ. ದೀರ್ಘ ಕಾಲದ ತಲೆನೋವು, ದಿನದ ನಿರ್ದಿಷ್ಟ ಸಮಯದಲ್ಲಿ ಪದೇ ಪದೇ ಕಾಣಿಸಿಕೊಳ್ಳುವ ತಲೆನೋವಿನ ಶಮನಕ್ಕೂ ಇದನ್ನು ಬಳಸಲಾಗುತ್ತಿದೆ.



ಈ ಬಳ್ಳಿಯನ್ನು ಬೇರೆ ಬೇರೆ ರೀತಿಗಳಲ್ಲಿ ಅಂದರೆ ಹಸಿ ಬೇರನ್ನು ಜಜ್ಜಿ ತೆಳ್ಳನೆಯ ಒದ್ದೆ ಬಟ್ಟೆಯಲ್ಲಿ ಸುತ್ತಿ ಹಣೆಯ ಮೇಲೆ ಪಟ್ಟು ಹಾಕುವುದು, ಬೇರಿನ ತುಂಡುಗಳನ್ನು ತಲೆದಿಂಬಿನ ಮೇಲೆ ಹರಡಿ ಅದರ ಮೇಲೆ ಮತ್ತೊಂದು ಪದರ ಬಟ್ಟೆ ಹಾಸಿ ಮಲಗುವುದು ಹಾಗೂ ಬೇರಿನ ತುಂಡುಗಳನ್ನು ಲಕ್ಕಿಸೊಪ್ಪಿನ ಜೊತೆ ತಲೆದಿಂಬಿನಲ್ಲಿ ತುಂಬಿ ಅದನ್ನು ಮದ್ದಿನ ದಿಂಬನ್ನಾಗಿ, ಹೀಗೆ ಅನೇಕ ಕ್ರಮಗಳಲ್ಲಿ ಬಳಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗೆ : ಬಿ.ಎಸ್. ಸೋಮಶೇಖರ್, ನಂ. 36, ನಿರಂಜನ ನಿಲಯ, 5ನೇ ಕ್ರಾಸ್, ಸರ್ಕಾರಿ ಕಾಲೇಜು ಎದುರು,ತುಮಕೂರು, ಇವರನ್ನು ಸಂಪರ್ಕಿಸಬಹುದು.

ಮೂಲ : ಪ್ರಜಾವಾಣಿ, 3 ಆಗಸ್ಟ್ 2006.

[illegible]

ಜಲಯೋಧರು : ಲೇಖಕರು : ಜೆ.ಕೆ. ಜಮಾದಾರ

ಪ್ರಕಟಕರು : ಜಿಯಾಲಾಜಿಕಲ್ ಸೊಸಾಯಿಟಿ ಆಫ್ ಇಂಡಿಯಾ, ಬೆಂಗಳೂರು

ವಿಶ್ವದಾದ್ಯಂತ ವಿಶ್ವಜಲದಿನಾಚರಣೆಯ ಹೆಸರಿನಲ್ಲಿ ಜಲಸಂಪನ್ಮೂಲಕ್ಕೆ ಉಂಟಾಗುತ್ತಿರುವ ಕ್ಷೋಭೆಯನ್ನು ಕುರಿತು ಚರ್ಚಿತವಾಗುತ್ತಿದೆ. ಹಾಗೆ, ಅಂತರರಾಷ್ಟ್ರೀಯ, ಅಂತರರಾಜ್ಯ, ಗ್ರಾಮಂತರ ಜಲವಿವಾದಗಳು ಕುದಿಯುತ್ತಿರುವ ಈ ಸಂದರ್ಭದಲ್ಲಿ , ಜಲಚಿಂತನದಿಂದ ಚೇತನರಾಗಿ ದೇಶದ ವಿವಿಧ ಭಾಗಗಳಲ್ಲಿ ಭಗೀರಥರಂತೆ ಜಲಸಂರಕ್ಷಣೆಗಾಗಿ ಹೊರಾಡುತ್ತಿರುವ ಯೋಧರ ವ್ಯಕ್ತಿತ್ವ , ಅವರ ಸಾಧನೆಯ ಮೂಲಕ ಉಂಟಾದ ಪರಿಣಾಮವನ್ನು ಓದುಗರಿಗೆ ಹಂಚುವ ಘನ ಕಾರ್ಯವನ್ನು ಶ್ರೀ ಜಮಾದಾರರವರು ಅತ್ಯಂತ ಪರಿಣಾಮಕಾರಿಯಾಗಿ ಈ ಪುಸ್ತಕದ ಮೂಲಕ ಮಾಡಿದ್ದಾರೆ.

ಇಲ್ಲಿ ವಿವಿಧ ಉದ್ಯೋಗ, ಹುದ್ದೆಗಳಲ್ಲಿದ್ದವರು ಸ್ವಂತ ಸುಖವನ್ನು ತೊರೆದು, ಪ್ರಕೃತಿಯ ಆರಾಧನೆಯಲ್ಲಿ ತೊಡಗಿ ಆನಂದ ಪಟ್ಟಿರುವ ಜೀವಂತ ಕಥನವಿದೆ. ನೀರಿನ ಸಂರಕ್ಷಣೆಯಿಂದ ಮೊದಲುಗೊಂಡು ಇಡೀ ಪರಿಸರದಲ್ಲಿ ಬದುಕುವ, ಜನತೆಯ ಒಳತಿಗಾಗಿ ಹೋರಾಡುತ್ತ, ಅನೇಕಾನೇಕ ತೊಂದರೆಗಳನ್ನು ಅನುಭವಿಸಿದರೂ, ಸಮಾಜ ರಕ್ಷಣೆಯ ಅನುಭವ ಪಡೆದು ಧನ್ಯರಾದವರ ಚಿತ್ರಣ ಪ್ರತಿ ಓದುಗನಿಗೂ ಪ್ರೇರಣಾದಾಯಕ ಹಾಗೂ ಅನುಕರಣೀಯ.

'ದೇಸಿ' ಅಂಗಡಿಯಲ್ಲಿ ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ

ಬೆಂಗಳೂರಿನಲ್ಲಿರುವ 'ದೇಸಿ' ಸಂಸ್ಥೆಯು ತನ್ನ ಅಂಗಡಿಯಲ್ಲಿ ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟವನ್ನು ಹಮ್ಮಿಕೊಂಡಿರುತ್ತದೆ. ಈ ಯೋಜನೆಯು ದೇಸಿಯ ಎಲ್ಲಾ ಮಾರಾಟ ಮಳಿಗೆಗಳಲ್ಲಿ ಲಭ್ಯವಿರುತ್ತದೆ. ಕನ್ನಡ ಪುಸ್ತಕಗಳನ್ನು ಕೊಂಡು ಓದುವವರಿಗೆ ಪ್ರೋತ್ಸಾಹ ನೀಡಬೇಕೆಂಬುದು ಈ ಸಂಸ್ಥೆಯ ಉದ್ದೇಶ. ಬನ್ನಿ ಕನ್ನಡ ಪುಸ್ತಕಗಳನ್ನು ಕೊಂಡು ಓದಿ! ಪುಸ್ತಕ ಚಳುವಳಿಯನ್ನು ಬೆಳಸಿ. *ವಿಳಾಸ : 'ದೇಶಿ', 27. ಪಟಾಲಮ್ಮ ಗುಡಿ ಬೀದಿ, ಸೌತ್ ಎಂಡ್ ಸರ್ಕಲ್, ಬಸವನಗುಡಿ ಬೆಂಗಳೂರು–560 004, ದೂರವಾಣಿ :080–26576669.*

ನಂದೀಹಳ್ಳಿಯ ಉದ್ಯಮ ಶೀಲ ದಂಪತಿ

ಲೇಖಕರು: ಬಸವರಾಜ ಎಚ್.ಕೆ ಮತ್ತು ಅಶೋಕ್ ಟಿ.ಎನ್

ಪ್ರಕಾಶನ – ಪರ್ಯಾಯ ಕೃಷಿ ಮಾಧ್ಯಮ ಕೇಂದ್ರ, ಧಾರವಾಡ.

ಇದು 'ಕ್ಯಾಮ್'ನ ಎರಡನೇ ಪುಸ್ತಕ. ಗ್ರಾಮೀಣ ಯಶೋಗಾಥೆಯ ಮೇಲೆ ಬೆಳಕು ಬೀರುವಂತಿದೆ. ತುಮಕೂರು ತಾಲೂಕಿನ ನಂದಿಹಳ್ಳಿಯ ನೀಲಕಂಠ ಮೂರ್ತಿ, ಅನಿತಾ ದಂಪತಿಗಳು ತಮ್ಮ ಓದೇಕಾರ್ ಫಾರಂ ನಲ್ಲಿ ಹಮ್ಮಿಕೊಂಡಿರುವ ಹತ್ತಾರು ಚಟುವಟಿಕೆಗಳ ವಿವರಗಳನ್ನು ಒಳಗೊಂಡಿರುತ್ತದೆ.

ಜೀವವೈವಿಧ್ಯ

ಗಜ ನಿಂಬೆ

ಅಪರೂಪದ ಹಾಗೂ ತುಂಬಾ ವಿರಳವಾಗಿರುವ ಗಜನಿಂಬೆಯ ಸಸ್ಯ ತಳಿ ಒಂದನ್ನು ಮಂಡ್ಯ ಜಿಲ್ಲೆಯ, ಹೊಸಹಳ್ಳಿಯ ರೈತರಾದ ರಮೇಶ್ ಸಂರಕ್ಷಿಸಿಕೊಂಡು ಬಂದಿರುವರು. ಇದು ಮೂರು ತಲೆಮಾರಿನಷ್ಟು ಹಳೆಯದಾಗಿದ್ದು, ಈಗಲೂ ಉತ್ತಮ ಫಸಲನ್ನು ನೀಡುತ್ತಿದೆಯಂತೆ. ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿಯೂ ಬಳಸುತ್ತಿರುವುದು ಮತ್ತು ಬೆಳೆಸುತ್ತಿರುವುದು ಹುಳಿ ನಿಂಬೆ. ಇದನ್ನು ಬೀಜಗಳಿಂದ ಅಭಿವೃದ್ಧಿ ಪಡಿಸಲಾಗುತ್ತಿದೆ. ಆದರೆ ಗಜನಿಂಬೆಯಲ್ಲಿ ಬೀಜಗಳಿರುವುದಿಲ್ಲ. ಹಾಗಾಗಿ ಇದನ್ನು ರೆಂಬೆ ಕಸಿಯಿಂದಲೇ ಅಭಿವೃದ್ಧಿಪಡಿಸಬೇಕಾಗುತ್ತದೆ. ಈ ಕಾರಣದಿಂದಲೇ ಇದು ಜನಪ್ರಿಯವಾಗದಿರಲು ಮತ್ತು ಅಪರೂಪವಾಗುತ್ತಿರುವ ತಳಿಯಾಗಿದೆ. ಆದರೆ ಒಮ್ಮೆ ಅಭಿವೃದ್ಧಿ ಪಡಿಸಿದರೆ ಅನೇಕ ತಲೆಮಾರಿನವರೆಗೆ ಫಲಕೊಡುವ ಈ ಗಜನಿಂಬೆ ಆಗಸ್ಟ್ ಮತ್ತು ಫೆಬ್ರವರಿಯಲ್ಲಿ ಹೂ ಬಿಡುತ್ತದೆ. ಮುಖ್ಯ ಫಸಲು ಆಗಸ್ಟನಲ್ಲಿ ಬರುತ್ತದೆ. ಇದರ ಕಾಯಿಗಳು ಉದ್ದಕ್ಕಿದ್ದು, ಬಲಿತಾಗ ಒಂದೇ ಕಾಯಿ ಕಾಲು ಕೆ.ಜಿ. ವರೆಗೂ ತೂಗುತ್ತದೆ. ಕನಿಷ್ಠ ಒಂದು ಕಾಯಿ 100 ಮಿ.ಲಿ.ಯಷ್ಟು ರಸ ಕೊಡುತ್ತದೆ. ರಸಕ್ಕಿಂತ ಉಪ್ಪಿನಕಾಯಿ ತಯಾರಿಕೆಗೆ ಹೆಚ್ಚು ಉಪಯೋಗಿಸಲ್ಪಡುವ ಇದು ಮನೆ ಬಳಕೆ ಮತ್ತು ವಾಣಿಜ್ಯ ಉದ್ದೇಶ ಎರಡಕ್ಕೂ ಸೂಕ್ತವಾಗಿದೆ. ದಕ್ಷಿಣ ಭಾರತವೇ ಇದರ ಮೂಲವಾಗಿದ್ದು, ಸರಾಸರಿ 750 ಮಿ.ಮಿ.ಗಿಂತಲೂ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿಯೂ ಇದನ್ನು ಫಲಪ್ರದವಾಗಿ ಬೆಳೆಯಬಹುದು.

ಮೂಲ: ಪ್ರಜಾವಾಣಿ 4/1/2006

ಆಳ್ವೆಕೋಡೆ ಈರುಳ್ಳಿ

ಈರುಳ್ಳಿಯನ್ನು ಸಾಮಾನ್ಯವಾಗಿ ಎಲ್ಲರೂ ದಿನನಿತ್ಯದ ಅಡುಗೆಯಲ್ಲಿ ಉಪಯೋಗಿಸುತ್ತಾರೆ. ಇದನ್ನು ಬಳಸುವುದರಿಂದ ಜೀರ್ಣಶಕ್ತಿಯು ವೃದ್ಧಿಯಾಗುತ್ತದೆ. ಆದರೆ ಎಲ್ಲಾ ಕಡೆ ಸಿಗುವ ಈರುಳ್ಳಿಗಿಂತ, ರುಚಿಯಲ್ಲಿ ಒಂದು ಕೈ ಮುಂದೆ ಎನ್ನಬಹುದಾದಂತಹ ಈರುಳ್ಳಿಯನ್ನು ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಆಳ್ವೆಕೋಡಿ ಭಾಗದಲ್ಲಿ ಜನರು ಬೆಳೆಯುತ್ತಾರೆ. ಇದು ರುಚಿಯಲ್ಲಿ ಸಿಹಿ ಮಿಶ್ರಿತವಾಗಿದ್ದು, ಕರಾವಳಿಯ ಮೀನು, ಏಡಿ, ಮತ್ತು ಸೀಗಡಿ ಆಧಾರಿತ ಆಹಾರಕ್ಕೆ ಮತ್ತು ಸಸ್ಯಾಹಾರ ಊಟಕ್ಕೆ ಹೇಳಿಮಾಡಿಸಿದಂತಿರುತ್ತದೆ. ಈ ಕಾರಣಕ್ಕಾಗಿಯೇ ಆಳ್ವೆಕೋಡಿ ಈರುಳ್ಳಿಗೆ ಬೇಡಿಕೆ ಜಾಸ್ತಿ. ಈ ಬೆಳೆಯನ್ನು ಸಮುದ್ರ ತೀರದಿಂದ ಸ್ವಲ್ಪ ದೂರದಲ್ಲಿರುವ ಭತ್ತದ ಕೃಷಿ ಮಾಡುವ ಭೂಮಿಯಲ್ಲಿ ಎರಡನೇ ಬೆಳೆಯಾಗಿ ಬೆಳೆಯುತ್ತಾರೆ. ಈ ಭೂಮಿಯ ಮಣ್ಣು ಮರಳು ಮಿಶ್ರಿತವಾಗಿದ್ದು ಈ ಬೆಳೆಗೆ ಅನುಕೂಲವಾಗಿದೆ. ಇಲ್ಲಿಯ ರೈತರು ಪ್ರತಿವರ್ಷ 300-400ಲಾರಿಗಳಾಗುವಷ್ಟು ಬೆಳೆಯನ್ನು ಬೆಳೆದು ಸ್ಥಳೀಯವಾಗಿಯೇ ಮಾರಾಟ ಮಾಡುತ್ತಾರೆ. ಈರುಳ್ಳಿಯನ್ನು ಅದರ ಕಾಂಡ ಸಮೇತವಾಗಿಯೇ ಕಿತ್ತು, ಅವುಗಳನ್ನು ಗೊಂಚಲು (ಪೊತ್ತೆ)ಗಳನ್ನಾಗಿ ಕಟ್ಟಿ ಆಳ್ವೆಕೋಡಿಯ ರಸ್ತೆಯ ಬದಿಯಲ್ಲಿ ಮಾರುತ್ತಾರೆ. ಬೇರೆ ಈರುಳ್ಳಿಗಿಂತ ಬೆಲೆ ಜಾಸ್ತಿಯಾದರೂ ಕೂಡ ಇದು ಬೇಡಿಕೆಯನ್ನು ಪಡೆದಿದೆ. ಇದನ್ನು ತುಂಬ ದಿನಗಳ ಕಾಲ ಶೇಖರಿಸಿಡಬಹುದು. ಇದರ ಜೈವಿಕ ವೈಶಿಷ್ಟತೆಯನ್ನು ಬೇರೆಯವರು ಕೊಳ್ಳೆ ಹೊಡೆಯದಂತೆ ಕಾಪಾಡುವುದು ಇಂದು ಅತ್ಯಗತ್ಯವಾಗಿದೆ. ಸದ್ಯದ 'ಬೌದ್ಧಿಕ ಸನದಿನ ಹಕ್ಕಿನ' ಕಾಯಿದೆಯ ಅಡಿಯಲ್ಲಿ ಭೌಗೋಳಿಕ ಆಧಾರದ (*Geographical Affiliation*) ಮೇಲೆ ಇದರ ವೈಶಿಷ್ಟತೆಯನ್ನು ಕಾಪಾಡಲು ಪ್ರಯತ್ನಿಸಬಹುದಾಗಿದೆ.

ಮೂಲ : ಉಷಾಕಿರಣ, ಮಾರ್ಚ 2006

ಮಾರುಕಟ್ಟೆ

ಅಡಿಕೆ ವೈನ್

ವಿಟ್ಲ ಸಮೀಪದ ಬದನಾಜೆಯ ಶಂಕರ ಭಟ್ ಅವರು, ಇದೀಗ ಎಳೆಯ ಅಡಿಕೆಯಿಂದ ಮದ್ಯ ತಯಾರಿಕೆಯನ್ನು ಸಂಶೋಧಿಸಿದ್ದಾರೆ. ಅಡಿಕೆಯ ಔಷದೀಯ ಗುಣ ವಿಶೇಷಣಗಳ ಬಗ್ಗೆ ತಮ್ಮ ಮನೆ 'ಪೂಗವನ'ದಲ್ಲಿ ನಿರಂತರ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಶಂಕರ ಭಟ್, ಎಳೆಯ ಅಡಿಕೆಯಿಂದ ಸ್ವಾದಿಷ್ಟವಾದ ಪರಿಮಳಭರಿತವಾದ ಮದ್ಯ ತಯಾರಿಸಬಹುದು ಎಂಬುದನ್ನು ಸಾಬೀತು ಪಡಿಸಿದ್ದಾರೆ.

ಪ್ರಯೋಗ ಶಾಲೆಯಲ್ಲಿ ಅವರು ಎಳೆಯ ಅಡಿಕೆಯಿಂದ ತಯಾರಿಸಿದ ಪಾನೀಯದಲ್ಲಿ ಶೇ. 10 ರಷ್ಟು ಆಲ್ಕೋಹಾಲ್ ಇರುವುದು ಕಂಡುಬಂತು. ಎಳೆಯ ಅಡಿಕೆ ಅತ್ಯಧಿಕ ಪ್ರಮಾಣದಲ್ಲಿ ಸಕ್ಕರೆಯನ್ನು ಹೀರಿಕೊಂಡು ಅದನ್ನು ಉಳಿಸಿಕೊಳ್ಳುವ ಗುಣ ಹೊಂದಿರುವುದರಿಂದ ಇದು ವೈನ್ ತಯಾರಿಕೆಗೆ ಅತ್ಯಂತ ಸೂಕ್ತ ಎನ್ನಲಾಗಿದೆ. ಎಳೆಯ ಅಡಿಕೆಯಲ್ಲಿ ಪಿತ್ತಕಾರಕ ಗುಣ ಹೆಚ್ಚಾಗಿ ಇದೆ. ಅದನ್ನು ಹದ ಪ್ರಮಾಣಕ್ಕೆ ಇಳಿಸಿದಲ್ಲಿ ಲಘು ಪಾನೀಯಗಳಲ್ಲಿ ಕೂಡಾ ಬಳಸಬಹುದಾಗಿದೆ. ಆದರೆ ಲಘು ಪಾನೀಯಕ್ಕೆ ಸಕ್ಕರೆ ಸೇರ್ಪಡೆಯಾದೊಡನೆ ಆಲ್ಕೋಹಾಲ್ ಅಂಶ ಶೇ. ಎರಡಕ್ಕಿಂತ ಹೆಚ್ಚಾಗುವುದರಿಂದ ಇದನ್ನು 'ಆಲ್ಕೋಹಾಲಿಕ್ ಬಿವರೇಜ್' ಎಂದೇ ಪರಿಗಣಿಸಬೇಕಾಗುತ್ತದೆ. ಹಾಗಾಗಿ ಎಳೆಯ ಅಡಿಕೆಯನ್ನು ಲಘು ಪಾನೀಯಕ್ಕಿಂತ ವೈನ್ ತಯಾರಿಕೆಗೆ ಬಳಸುವುದು ಹೆಚ್ಚು ಸೂಕ್ತ ಎನ್ನುತ್ತಾರೆ ಶಂಕರ ಭಟ್. ಇದು ಜೀರ್ಣಾಂಗಗಳನ್ನು ಶುದ್ಧಿ ಮಾಡುವುದಲ್ಲದೇ, ಔಷಧೀಯ ಗುಣಗಳನ್ನೂ ಹೊಂದಿರುವುದರಿಂದ ಊಟಕ್ಕೆ ಮೊದಲು ಅಥವಾ ನಂತರವೂ ಸೇವನೆಗೆ ಯೋಗ್ಯ ಎಂದು ಅವರು ಅಭಿಪ್ರಾಯ ಪಡುತ್ತಾರೆ. ಅಡಿಕೆ ವೈನ್ ಕುಡಿದ ಬಳಿಕ ವೀಳ್ಯ ಹಾಕಿದಾಗ ಬರುವಂಥ ಪರಿಮಳವೇ ಬಾಯಿಯಿಂದ ಹೊರ ಸೂಸುತ್ತದೆ. ಅಡಿಕೆ ಅತ್ಯುತ್ತಮ ಚಾಕಲೇಟ್ ಬಣ್ಣವನ್ನು ನೈಸರ್ಗಿಕವಾಗಿ ಕೊಡುವುದರಿಂದ ಅಡಿಕೆ ವೈನ್ ಆಕರ್ಷಕ ಚಾಕಲೇಟ್ ಬಣ್ಣವನ್ನು ಹೊಂದಿದ್ದು, ಆರೋಗ್ಯವರ್ಧಕ ಪೇಯವಾಗಿರುತ್ತದೆ. ಅಲ್ಲದೆ ಅಡಿಕೆ ವೈನ್ ಹಳೆಯದಾದಷ್ಟು ಅದರ ರುಚಿ, ಪರಿಮಳ ಇನ್ನಷ್ಟು ಉತ್ಕೃಷ್ಟವಾಗುತ್ತದೆ. ಈ ರೀತಿ ವೈನ್ ತಯಾರಿಕೆಗೆ ಕೊಳೆರೋಗದಿಂದ ಉದುರಿದ ಹಸಿ ಅಡಿಕೆಯನ್ನೂ ಬಳಸಬಹುದು. ಒಂದು ಕಿ.ಗ್ರಾಂ. ಎಳೆ ಅಡಿಕೆಯಿಂದ ಕನಿಷ್ಠ 15 ಲೀಟರ್ ವೈನ್ ತಯಾರಿಸಬಹುದು ಎನ್ನಲಾಗಿದೆ. ವ್ಯವಸ್ಥಿತವಾಗಿ ತಯಾರಿಸಿದ ವೈನ್ ನೂರಾರು ವರ್ಷ ಇಟ್ಟರೂ ಹಾಳಾಗದು. ಹಾಗಾಗಿ ಅಡಿಕೆ ವೈನ್ ಈಗಾಗಲೇ ಮಾರುಕಟ್ಟೆ ಯಲ್ಲಿರುವ ವೈನ್‌ನಷ್ಟೇ ಬೆಲೆ ಬಾಳಬಹುದು ಎನ್ನುತ್ತಾರೆ ಶಂಕರಭಟ್.

ಈ ಪ್ರಯೋಗವನ್ನು ಕಾರ್ಯರೂಪಕ್ಕೆ ತರಲು ಒಂದೆರಡು ವರ್ಷಗಳಾಗಬಹುದು ಎನ್ನಲಾಗಿದೆ. ಇದಕ್ಕಾಗಿ ಸಮಾನ ಮನಸ್ಕರ ಒಂದು ಖಾಸಗಿ ಕಂಪನಿಯನ್ನು ಹುಟ್ಟು ಹಾಕಲು ಈಗಾಗಲೇ ಪ್ರಯತ್ನಿಸಲಾಗಿದೆ. ಇವೆಲ್ಲಾ ಸರಿಯಾಗಿ ನಡೆದಲ್ಲಿ ಮುಂದೆ ಆರೋಗ್ಯ, ಮತ್ತು ರುಚಿಯನ್ನು ಮೈ ಗೂಡಿಸಿಕೊಂಡಿರುವ ಈ ಅರೆಕಾ ವೈನ್ ಬಳಕೆಗೆ ಸಿಗುವ ದಿನ ದೂರವಿರದು. ಬೆಳೆ ಹಾಳು, ಬೆಲೆ ಇಳಿತಗಳೆರೆಡರ ಹೊಡೆತದಿಂದ ಕಂಗೆಟ್ಟಿರುವ ಅಡಿಕೆ ಬೆಳೆಗಾರನಿಗೆ ಇದರಿಂದ ಆರ್ಥಿಕ ದೃಢತೆ ದೊರೆಯುವುದರಲ್ಲಿ ಅನುಮಾನ ವಿರದು.



ವಿ.ಸೂ: ಶಂಕರಭಟ್ಟರ್ ಈ ಅನುಶೋಧನೆಯನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ 6 ನೇ ರಾಷ್ಟ್ರೀಯ ಸ್ಪರ್ಧೆಗೆ ಶಿಫಾರಸ್ಸು ಮಾಡಲಾಗುವುದು.

ಶ್ರೀ (Sri) ಪದ್ಧತಿ: ನಿಂತ ನೀರಿಲ್ಲದ ಬತ್ತದ ಬೇಸಾಯ

ಇದುವರೆಗೂ ಬತ್ತವು ಹೆಚ್ಚು ನೀರು ಬೇಡುವ ಬೆಳೆ ಮತ್ತು ನೀರಾವರಿ ಪ್ರದೇಶಗಳಲ್ಲಿ ಮಾತ್ರ ಬೆಳೆಯಲು ಯೋಗ್ಯ ಎಂದು ಪರಿಗಣಿಸಲ್ಪಟ್ಟಿತ್ತು. ಅದರಂತೆ ಗದ್ದೆಯಲ್ಲಿ 4-5 ಸೆಂ.ಮೀ. ನಷ್ಟು ನೀರು ನಿಲ್ಲಿಸಿ ಬೆಳೆಯುವುದು ಸರ್ವೆ ಸಾಮಾನ್ಯ ವಾಗಿತ್ತು. ಆದರೆ ಬತ್ತವನ್ನೂ ಸಹ ಇನ್ನಿತರ ಒಣ ಬೇಸಾಯ ಬೆಳೆಗಳಂತೆ ನೀರು ನಿಲ್ಲಿಸದೇ ಯಶಸ್ವಿಯಾಗಿ ಬೆಳೆಯಬಹುದು ಎನ್ನುವುದು ಮಾತ್ರವಲ್ಲ, ಇಂತಹ ಒಂದು ಪದ್ಧತಿಯನ್ನು ಮಡಗಾಸ್ಕರ್ ದೇಶದಲ್ಲಿ ಹೆನ್ರಿ ಡಿ ಲಾಲನಿ ಎಂಬ ಕ್ರೈಸ್ತ ಧರ್ಮಗುರು ಸ್ಥಳೀಯ ರೈತರೊಡಗೂಡಿ ಸಿದ್ಧ ಪಡಿಸಿರುತ್ತಾರೆ. ಇದನ್ನೇ ಮಡಗಾಸ್ಕರ್ ಬತ್ತದ ಬೇಸಾಯ ಪದ್ಧತಿ ಎಂತಲೂ ಅಥವಾ ಶ್ರೀ (Sri-System of Rice Intensification) ಪದ್ಧತಿ ಎಂತಲೂ ಕರೆಯಲಾಗುತ್ತಿದೆ.

ಶ್ರೀ ಪದ್ಧತಿಯ ಮೂಲ ಭೂತ ಅಂಶಗಳು: ★ ಅತಿ ಚಿಕ್ಕ ವಯಸ್ಸಿನ ಸಸಿಗಳನ್ನು ಅಂದರೆ, ಎರಡು ಎಲೆ ಹಂತದ 8-12 ದಿನಗಳ ಪ್ರಾಯದ ಪೈರನ್ನು ಪ್ರತಿಗುಣಿಗೆ ಕೇವಲ ಒಂದರಂತೆ ನಾಟಿ ಮಾಡುವುದು. ★ ಜಾಗರೂಕತೆಯಿಂದ, ಸಸಿ ಮಡಿಯಿಂದ ಸಸಿಗಳನ್ನು ಹಾನಿಯಾಗದಂತೆ ಇಡಿಯಾಗಿ ತೆಗೆದು ಶೀಘ್ರದಲ್ಲಿಯೇ ಗದ್ದೆಯಲ್ಲಿ ನಾಟಿ ಮಾಡಬೇಕು. ★ ಹೆಚ್ಚು ಅಂತರದಲ್ಲಿ ನಾಟಿ ಮಾಡುವುದು: ಸಸಿಗಳನ್ನು ಚೌಕಾಕಾರದಲ್ಲಿ 25 ಸೆ.ಮಿ. ಅಂತರದ ಸಾಲಿನಲ್ಲಿ ಒಂದೊಂದೇ ಸಸಿಯನ್ನು ನಾಟಿ ಮಾಡುವುದು. ★ ನೀರು ನಿರ್ವಹಣೆ : ವಾಡಿಕೆಯಂತೆ ಗದ್ದೆಯಲ್ಲಿ ನೀರು ನಿಲ್ಲಿಸದೇ ಮಣ್ಣಿನ ಗುಣ ಧರ್ಮವನ್ನಾಧರಿಸಿ 4-5 ದಿನಗಳಿಗೊಮ್ಮೆ ಕೇವಲ ತೇವಾಂಶವಿರುವಂತೆ ನೋಡಿಕೊಳ್ಳುವುದು. ನೀರು ಆಕಸ್ಮಿಕವಾಗಿ ಹೆಚ್ಚಾದಲ್ಲಿ ಆ ನೀರು ಬಸಿದುಹೋಗುವಂತೆ ಪ್ರತಿ 2 ಮೀಟರ್ ಅಂತರದಲ್ಲಿ ಸುಮಾರು 30-40 ಅಗಲದ ಬಸಿಗಾಲುವೆಗಳನ್ನು ನಿರ್ಮಿಸುವುದು. ★ ಕಳೆ ನಿಯಂತ್ರಣ : ಗದ್ದೆಯಲ್ಲಿ ನೀರು ನಿಲ್ಲದೆ, ಸಾಕಷ್ಟು ತೇವಾಂಶ ಇರುವುದರಿಂದ ಕಳೆಗಳ ಹಾವಳಿಯೂ ಹೆಚ್ಚಾಗಿರುತ್ತದೆ, ವಿವಿಧ ಮಾದರಿಯ ವೀಡರ್ ಉಪಕರಣಗಳನ್ನು ಬೆಳೆಯ ಎರಡೂ ದಿಕ್ಕಿನಲ್ಲಿ ಹತ್ತು ದಿನಗಳ ಅಂತರದಲ್ಲಿ ಕನಿಷ್ಠ 4 ಬಾರಿ ಹಾಯಿಸುವುದರಿಂದ ಕಳೆಯ ಯಶಸ್ವಿ ನಿರ್ವಹಣೆ ಸಾಧ್ಯ. ಈ ರೀತಿಯ ಯಾಂತ್ರೀಕೃತ ಕಳೆ ನಿರ್ವಹಣೆಯಿಂದ ಕಳೆಯನ್ನು ಮಣ್ಣಿಗೆ ಸೇರಿಸುವುದಲ್ಲದೇ ಹೆಚ್ಚಿನ ಆಮ್ಲಜನಕ ಮಣ್ಣಿನಲ್ಲಿ ಚಾಲನೆಯಾಗಿ ಬೇರಿನ ಅಭಿವೃದ್ಧಿಗೆ ಮತ್ತು ಸೂಕ್ಷ್ಮಜೀವಿಗಳ ವೃದ್ಧಿಗೆ ಸಹಾಯವಾಗುತ್ತದೆ. ★ ಸಾವಯವ ಗೊಬ್ಬರಗಳ ಬಳಕೆ: ಈ ಪದ್ಧತಿಯಲ್ಲಿ ಸಾವಯವ ಗೊಬ್ಬರಗಳನ್ನು ಹೆಚ್ಚಾಗಿ ಬಳಸುವುದರಿಂದ ಸೂಕ್ಷ್ಮ ಜೀವಿಗಳು ವೃದ್ಧಿಯಾಗಿ ಮಣ್ಣು ಫಲವತ್ತಾಗಿ ಕಣ ರಚನೆಯು ಉತ್ತಮವಾಗಿರುತ್ತದೆ.

ಸಾಂಪ್ರದಾಯಿಕ ಪದ್ಧತಿಗೆ ಹೋಲಿಸಿದರೆ ಶ್ರೀ ಪದ್ಧತಿಯ ಉತ್ತಮ ಅಂಶಗಳು

ಸಾಂಪ್ರದಾಯಿಕ ಪದ್ಧತಿ	ಶ್ರೀ ಪದ್ಧತಿ
1 ಎಕರೆಗೆ 20-25 ಕೆ.ಜಿ. ಬಿತ್ತನೆ ಬೀಜ ಬೇಕಾಗುತ್ತದೆ.	ಎಕರೆಗೆ 2 ಕೆ.ಜಿ. ಬಿತ್ತನೆ ಬೀಜ ಸಾಕಾಗುತ್ತದೆ.
2. 25-30 ದಿನಗಳ ಪ್ರಾಯದ ಸಸಿಯನ್ನು ನಾಟಿ ಮಾಡಲಾಗುತ್ತದೆ.	8-12 ದಿನಗಳ ಸಸಿಯನ್ನು ನಾಟಿ ಮಾಡಲಾಗುವುದು.
3. ಸಸಿಗಳನ್ನು ಕೀಳುವಾಗ ಹಾನಿಯಾಗುವ ಸಾಧ್ಯತೆ ಹೆಚ್ಚು ಹಾಗೂ ಸಸ್ಯವು ನಾಟಿಯ ನಂತರ ಹೊಂದಿಕೊಳ್ಳಲು ಕಷ್ಟವಾಗುತ್ತದೆ.	ಸಸಿಗಳನ್ನು ಬಹಳ ಜಾಗರೂಕತೆಯಿಂದ ನಿರ್ವಹಿಸುವುದರಿಂದ ಹಾನಿಯಾಗುವುದಿಲ್ಲ.
4. ನಾಟಿಯಲ್ಲಿ ಅಂತರದ ಪರಿಗಣನೆ ಇಲ್ಲ ಒಂದು ಚದರ ಮೀಟರ್‌ಗೆ 35-60 ಸಸಿಗುಣಿಗಳನ್ನು ನಾಟಿ ಮಾಡಲಾಗುತ್ತದೆ.	ಚೌಕಾಕಾರದಲ್ಲಿ ಪ್ರತಿ ಚದರ ಮೀಟರ್‌ಗೆ 16 ಸಸಿಗಳು ಬರುವಂತೆ ನಾಟಿಮಾಡಲಾಗುತ್ತದೆ.
5. ಮೂರು ಅಥವಾ ಹೆಚ್ಚು ಸಸಿಗಳನ್ನು ಪ್ರತಿ ಗುಣಿಯಲ್ಲಿ ನಾಟಿ ಮಾಡಲಾಗುವುದು.	ಪ್ರತಿ ಗುಣಿಗೆ ಒಂದು ಸಸಿಯನ್ನು ಮಾತ್ರ ನಾಟಿ ಮಾಡಲಾಗುವುದು.
6. ರಸಗೊಬ್ಬರಗಳ ಬಳಕೆ ಹೆಚ್ಚಾಗಿದ್ದು ಮೇಲು ಗೊಬ್ಬರವನ್ನು ನೀಡಬೇಕು.	ಸಾವಯವ ಗೊಬ್ಬರಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ. ಮೇಲುಗೊಬ್ಬರದ ಬಳಕೆಗೆ ಶಿಫಾರಸ್ಸು ಇಲ್ಲ.
7. ಗದ್ದೆಯಲ್ಲಿ 4-5 ಸೆಂ.ಮೀ. ನೀರು ನಿಲ್ಲಿಸಲಾಗುತ್ತದೆ.	ಗದ್ದೆಯಲ್ಲಿ ತೇವಾಂಶವಿರುವಂತೆ ಮಾತ್ರ ನೋಡಿಕೊಳ್ಳಲಾಗುತ್ತದೆ.
8. ಬೆಳೆಯು ಹಲವು ರೋಗಗಳಿಗೆ, ನೀರಿನಬರಕ್ಕೆ ತುತ್ತಾಗುತ್ತದೆ ಮತ್ತು ಅಡ್ಡ ಬೀಳುವುದು ಅಧಿಕವಾಗಿರುತ್ತದೆ.	ಬೆಳೆಯು ಗಡುಸಾಗಿದ್ದು ರೋಗಗಳಿಗೆ ತುತ್ತಾಗುವ ಪೈರು ಕಡಿಮೆ ಮತ್ತು ಅಡ್ಡ ಬೀಳುವುದಿಲ್ಲ.
9. ಕೊಯ್ಲಿಗೆ ಬರಲು ಅಧಿಕ ಸಮಯ ಬೇಕಾಗುತ್ತದೆ.	15 ದಿವಸ ಕಡಿಮೆ ಅವಧಿ ಸಾಕು.
10. ಸಾವಯವ ಕೃಷಿಗೆ ಅನುಕೂಲಕರವಲ್ಲ.	ಸಾವಯವ ಕೃಷಿಗೆ ಚೆನ್ನಾಗಿ ಹೊಂದಿಕೆಯಾಗುತ್ತದೆ.

ಶ್ರೀ ಪದ್ಧತಿಯ ಯಶಸ್ವಿ ಪ್ರಯೋಗಗಳು

1. ಕೇರಳದ ವೈನಾಡಿನಲ್ಲಿ ರಾಸ್ತಾ (RASTA) ದ ಅನುಭವಗಳು

'ರಾಸ್ತಾ' ನೆರೆಯ ಕೇರಳದ ವೈನಾಡಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಳಮಟ್ಟದ ಅಭಿವೃದ್ಧಿಗೆ ಸಂಬಂಧಿಸಿದ ಒಂದು ಸರ್ಕಾರೇತರ ಸಂಸ್ಥೆಯಾಗಿದೆ. ಈ ಸಂಸ್ಥೆ 2003 ರಿಂದ ಶ್ರೀ ಪದ್ಧತಿಗೆ ಸಂಬಂಧಿಸಿದ ಪ್ರಯೋಗಗಳನ್ನು ರೈತರ ಜಮೀನಿನಲ್ಲಿ ನಡೆಸುತ್ತ ಬಂದಿದೆ. ಇವರು ಎರಡು ರೀತಿಯ ನೀರಾವರಿ ವಿಧಾನಗಳನ್ನು ಬಳಸಿದ್ದಾರೆ. ಅವುಗಳೆಂದರೆ:

a) ಬೆಳಿಗ್ಗೆ ಗದ್ದೆಯಲ್ಲಿ ನೀರು ನಿಲ್ಲಿಸಿ ಸಂಜೆ ಬಸಿಯುವುದು ಅಥವಾ ಸಂಜೆ ನಿಲ್ಲಿಸಿ ಮರುದಿನ ಬೆಳಿಗ್ಗೆ ಬಸಿಯುವ ವಿಧಾನ: b) 3-4 ದಿನಗಳಿಗೊಮ್ಮೆ ಗದ್ದೆಗೆ ನೀರು ಹಾಯಿಸುವುದು. ಈ ಪ್ರಯೋಗಗಳಿಂದ ಸಂಸ್ಥೆಯು ಪಡೆದ ಫಲಿತಾಂಶವನ್ನು ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ.

ಈ ಮೂಲಕ ಸಂಸ್ಥೆಯು ಕೇರಳ ರಾಜ್ಯದಲ್ಲಿ ಸರ್ಕಾರದ ಮತ್ತು ಜನಸಾಮಾನ್ಯರ ಗಮನವನ್ನು ಶ್ರೀ ಪದ್ಧತಿಯೆಡೆಗೆ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಸಾಂಪ್ರದಾಯಿಕ ಪದ್ಧತಿಗೆ ಹೋಲಿಸಿದರೆ ಶ್ರೀ ಪದ್ಧತಿಯಲ್ಲಿ ಹೆಚ್ಚಳ

ಪೈರಿನ ಎತ್ತರ	28.2%
ಪೈರಿನ ಸಂಖ್ಯೆ	52%
ತೆಂಡೆಗಳ ಸಂಖ್ಯೆ	287.5%
ಇಳುವರಿ	62.3%

2.ನೇಪಾಳದಲ್ಲಿ ಶ್ರೀ ಪದ್ಧತಿಯು NARC(Nepal Agricultural Research Council) ನಿಂದ 1999 ರಲ್ಲಿ ಪರಿಚಿತವಾಯಿತು.

ಆನಂತರ ಹಲವಾರು ಸರ್ಕಾರೇತರ ಮತ್ತು ಸರ್ಕಾರಿ ಸಂಸ್ಥೆಗಳಿಂದ ಪರೀಕ್ಷಿಸಲ್ಪಟ್ಟು ದೇಶದೆಲ್ಲೆಡೆ ಸ್ವೀಕೃತವಾಗುವ ಹಾದಿಯಲ್ಲಿದೆ. ಯಾಂತ್ರಿಕ ಕಳೆ ನಿರ್ವಹಣೆ ಮತ್ತು ಹೆಚ್ಚಿನ ಸಾವಯುವ ಗೊಬ್ಬರಗಳ ಬಳಕೆ ಲಾಭದಾಯಕವೆಂದು ಇವರ ಪ್ರಯೋಗಗಳಿಂದ ಕಂಡು ಬರುತ್ತದೆ. ಸಾವಯವ ಗೊಬ್ಬರಗಳ ಬಳಕೆಯಿಂದ ಜೇಡಿಮಣ್ಣಿನಲ್ಲಿ ಮಣ್ಣು ಸೀಳುಬಿಡುವುದು ಸಹ ತಡೆಯಲ್ಪಡುತ್ತದೆ.

3. ನೆರೆಯ ತಮಿಳುನಾಡಿನಲ್ಲಿ ಶ್ರೀ ಪದ್ಧತಿ

5 ವರ್ಷಗಳ ಹಿಂದೆ ತಮಿಳುನಾಡಿನಲ್ಲಿ ಶ್ರೀ ಪದ್ಧತಿಯ ಮೇಲಿನ ಪ್ರಯೋಗಗಳು ಶುರುವಾಗಿ ಹಲವು ಫಲಿತಾಂಶಗಳು ಹೊರ ಬಂದಿವೆ. ಅವುಗಳಲ್ಲಿ ಮುಖ್ಯವಾದುವು ಕೆಳಗಿನಂತಿರುತ್ತವೆ.

a) 25 ರಿಂದ 30 ದಿನಗಳ ಪೈರಿಗೆ ಬದಲಾಗಿ 8-10 ದಿನ ವಯಸ್ಸಿನ ಪೈರಿನ ನಾಟಿ ಹೆಚ್ಚು ಲಾಭದಾಯಕವಾಗಿ ಕಂಡು ಬಂದಿದೆ. b) ಎಕರೆಗೆ 20 ಕೆ.ಜಿ ಬಿತ್ತನೆ ಬೀಜಕ್ಕೆ ಬದಲಾಗಿ 2 ಕೆ.ಜಿ ಸಾಕು c) ಎಕರೆಗೆ 800 ಚ.ಮೀ. ಸಸಿ ಮಡಿಗೆ ಬದಲಾಗಿ 100 ಚ.ಮೀ. ಸಸಿ ಮಡಿ ಸಾಕು. d) ರೋಟರಿ ಮತ್ತು ಕೋನೋ ವೀಡರ್ ಬಳಸುವುದರಿಂದ ಹೆಚ್ಚಿನ ಸಾವಯುವ ವಸ್ತುವು ಭೂಮಿಗೆ ಸೇರಿಸಲ್ಪಡುತ್ತದೆ.

ತಮಿಳುನಾಡಿನ ತನಿರಪರಾನಿ ಪ್ರದೇಶದಲ್ಲಿ ಶ್ರೀ ಪದ್ಧತಿಯಲ್ಲಿ ಇಳುವರಿ ಎಕರೆಗೆ 4214 ರಿಂದ 10655 ಕೆ.ಜಿ. ಇರುತ್ತದೆ. ಆದರೆ ಸಾಂಪ್ರದಾಯಿಕ ಪದ್ಧತಿಯಲ್ಲಿ 3887 ರಿಂದ 8730 ಕೆ.ಜಿ. ಪಡೆಯಲು ಮಾತ್ರ ಸಾಧ್ಯವಾಗಿದೆ ಎನ್ನಲಾಗಿದೆ.

> ಬಾಂಗ್ಲಾದೇಶ, ಕಾಂಬೋಡಿಯ, ಚೀನ, ಭಾರತ ಮತ್ತು ಶ್ರೀಲಂಕಾಗಳಲ್ಲಿ ನಡೆದಿರುವ ಹಲವು ಪ್ರಯೋಗಗಳಿಂದ ಶ್ರೀ ಪದ್ಧತಿಯಲ್ಲಿ ಉತ್ಪಾದನಾ ವೆಚ್ಚವು ಸಾಂಪ್ರಾದಾಯಿಕ ಪದ್ಧತಿಗಿಂತ ಶೇ. 20 ಕಡಿಮೆ ಎಂದು ತಿಳಿದು ಬಂದಿದೆ. ಅಲ್ಲದೆ ಈ ಪದ್ಧತಿಯಲ್ಲಿ ಗದ್ದೆಯಿಂದ ಮೀಥೇನ್ ಅನಿಲ ಬಿಡುಗಡೆಯಾಗುವುದಿಲ್ಲವಾದ್ದರಿಂದ ಇದು ಜಾಗತಿಕ ತಾಪ ಏರುವ (Global Warming) ಸಮಸ್ಯೆ ಇಲ್ಲದೆ ಪರಿಸರ ಸ್ನೇಹಿಯೂ ಆಗಿದೆ.

4.ಆಂಧ್ರ ಪ್ರದೇಶದ ಎನ್.ಜಿ.ರಂಗ ಕೃಷಿ ವಿಶ್ವ ವಿದ್ಯಾನಿಲಯ ಮತ್ತು ಕರ್ನಾಟಕದ ಕೃಷಿ ವಿಶ್ವ ವಿದ್ಯಾಲಯ ಬೆಂಗಳೂರು ಇವುಗಳ ವಿಜ್ಞಾನಿಗಳು ಶ್ರೀ ಪದ್ಧತಿಗೆ ಸಂಬಂಧಿಸಿದ ಹಲವು ಪ್ರಯೋಗಗಳನ್ನು ಕೈಗೊಂಡಿದ್ದಾರೆ. ಇವರುಗಳು ಶ್ರೀ ಪದ್ಧತಿಯು ಸಾವಯವ ಪದ್ಧತಿಗೆ ಹೆಚ್ಚು ಸೂಕ್ತ ಎಂದು ನಿರೂಪಿಸಿದ್ದಾರೆ. ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ ಅನುವಂಶೀಯ ಮತ್ತು ಸಸ್ಯ ತಳಿಶಾಸ್ತ್ರ ವಿಭಾಗವು ಶ್ರೀ ಪದ್ಧತಿಯ ಕುರಿತಾದ ಹಲವಾರು ಸಂಶೋಧನೆಗಳನ್ನು ಕೈಗೊಂಡಿದೆ. ಈ ಪ್ರಯೋಗಗಳ ಮುಖ್ಯ ಹಂತಗಳಲ್ಲಿ ಸ್ವತಃ ರೈತರನ್ನೇ ಭಾಗವಹಿಸುವಂತೆ ಮಾಡಿರುವುದು ಗಮನಾರ್ಹ. ಈ ಸಂಶೋಧನೆ ಹಲವು ಅಂಶಗಳನ್ನು ಹೊರಗೆಡಹಿದ್ದು, ಇದನ್ನು ಪಾಲಿಸಿದರೆ ಸುಸ್ಥಿರ ಇಳುವರಿ ಮಾತ್ರವಲ್ಲ, ರೈತರಿಗೆ ಲಾಭವೂ ಆಗಲಿದೆ.

ಈ ಸಂಶೋಧನೆಯ ಮುಖ್ಯಾಂಶಗಳು ಕೆಳಗಿನಂತೆ ಇವೆ:

1. ಸಸಿ ಮಡಿಯಲ್ಲಿ ಸಸಿಗಳನ್ನು ಬೆಳೆಸಿ ಪೈರುನಾಟಿ ಮಾಡುವ ಬದಲು ಸಾಲಿನಿಂದ ಸಾಲಿಗೆ 30 ಸೆಂ.ಮಿ. ಮತ್ತು ಬೀಜದಿಂದ ಬೀಜಕ್ಕೆ 15-20 ಸೆಂ.ಮೀ. ಇರುವಂತೆ ನೇರವಾಗಿ ಬಿತ್ತನೆ ಮಾಡುವುದು.
2. ಬಿತ್ತನೆಗೆ ಮೂರು ವಾರ ಮುಂಚೆ ಎಕರೆಗೆ 4 ಟನ್ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿಗೆ ಸೇರಿಸುವುದು ಮುಖ್ಯ.
3. ಬಿತ್ತನೆಯಾದ 20 ದಿವಸದಲ್ಲಿ ಒಮ್ಮೆ ಕೈಕಳೆ ಮಾಡಿಸಿ ನಂತರ 10 ದಿನಗಳ ಅಂತರದಲ್ಲಿ 2-3 ಸಲ ಅಂತರ ಬೇಸಾಯ ಮಾಡುವುದು.
4. ಬೆಳೆಯ ಮುಖ್ಯ ಹಂತಗಳಲ್ಲಿ ನೀರಿನ ಕೊರತೆಯಾಗದಂತೆ ನೋಡಿಕೊಳ್ಳುವುದು. ಮತ್ತು ಯಾವುದೇ ಹಂತದಲ್ಲಿಯೂ ಗದ್ದೆ ಒಣಗದಂತೆ ನೀರು ನಿರ್ವಹಣೆ ಮಾಡುವುದು. ಕೊಯ್ಲಿನ 8 ದಿವಸಗಳ ಮುಂಚೆ ನೀರು ಕೊಡುವುದು ನಿಲ್ಲಿಸುವುದು. ಈ ಕ್ರಮಗಳನ್ನು ಅನುಸರಿಸುವುದರಿಂದ ಒಂದು ಬೆಳೆಯನ್ನು 1650-3000 ಮಿ.ಮೀಗೆ ಬದಲಾಗಿ 935 ಮಿ ಮೀ. ನೀರಿನೊಂದಿಗೆ ಬೆಳೆಯಬಹುದು.
5. ಪ್ರತಿ ಬೆಳೆಗೆ 40 ಕೆ.ಜಿ. ಸಾರಜನಕ, 20 ಕೆ.ಜಿ. ರಂಜಕ, 20 ಕೆ.ಜಿ ಪೊಟ್ಯಾಷ್, ಮತ್ತು ಸೂಕ್ಷ್ಮ ಪೋಷಕಾಂಶಗಳಾದ ಸತುವಿನ ಸಲ್ಫೇಟ್ (8 ಕೆ.ಜಿ) ಮತ್ತು ಕಬ್ಬಿಣದ ಸಲ್ಫೇಟ್ (5 ಕೆ.ಜಿ) ಗಳನ್ನು ಬಳಸಿ ಇನ್ನೂ ಉತ್ತಮ ಇಳುವರಿ ಪಡೆಯಬಹುದೆನ್ನಲಾಗಿದೆ.
6. ಕಳೆಯ ಹಾವಳಿ ಹೆಚ್ಚಾಗಿರುವ ಸಂದರ್ಭದಲ್ಲಿ ಕಳೆನಾಶಕಗಳ ಬಳಕೆಯನ್ನು ಕೃಷಿ ವಿಶ್ವ ವಿದ್ಯಾನಿಲಯವು ಶಿಫಾರಸ್ಸು ಮಾಡುತ್ತದೆ.
7. ಈ ಕ್ರಮಗಳನ್ನು ಅಳವಡಿಸಿಕೊಳ್ಳುವುದರಿಂದ ಹೆಕ್ಟೇರಿಗೆ 45 ರಿಂದ 55 ಕ್ವಿಂಟಾಲ್ ಭತ್ತ ಮತ್ತು 60 ಕ್ವಿಂಟಾಲ್ ಮೇವನ್ನು ಪಡೆಯಬಹುದಾಗಿದೆ.

ಶ್ರೀ ಪದ್ಧತಿಯಲ್ಲಿ ಬೆಳೆಯಬಹುದಾದ ತಳಿಗಳು:-

ರಾಶಿ, ದೊಡ್ಡಬೈರನ ನೆಲ್ಲು ತಳಿಗಳು ಶ್ರೀ ಪದ್ಧತಿಯಲ್ಲಿ ಬೆಳೆಯಬಹುದಾದ ಬಳಕೆಯಲ್ಲಿರುವ ತಳಿಗಳಾಗಿವೆ. ಇವುಗಳ ಜೊತೆಗೆ MAS-946 ಮತ್ತು MAS-926 ಗಳು ಶ್ರೀ ಪದ್ಧತಿಯಲ್ಲಿ ಬೆಳೆಯುವುದಕ್ಕಾಗಿಯೇ ಅಭಿವೃದ್ಧಿಪಡಿಸಲಾಗಿರುವ ತಳಿಗಳಾಗಿವೆ. ಪ್ರಾಯೋಗಿಕ ಹಂತದಲ್ಲಿ ಈ ತಳಿಗಳನ್ನು ಇತರ ತಳಿಗಳೊಂದಿಗೆ ಬೆಂಗಳೂರು ಉತ್ತರದಲ್ಲಿರುವ ಶೆಟ್ಟಿಗೆರೆ ಗ್ರಾಮದ ರೈತರೊಬ್ಬರ ಜಮೀನಿನಲ್ಲಿ ಬೆಳೆಯಲಾಗಿತ್ತು. ಅಲ್ಲಿ ರೈತನಿಂದ ಆರಿಸಲ್ಪಟ್ಟ ತಳಿಗಳನ್ನು ದೇಶದ ವಿವಿದೆಡೆ ಪರೀಕ್ಷೆ ಗೊಳಪಡಿಸಿ ಅವುಗಳಲ್ಲಿ ಉತ್ತಮವೆನಿಸಿದ ಈ ಎರಡು ತಳಿಗಳನ್ನು ಅಭಿವೃದ್ಧಿಪಡಿಸಲಾಯಿತು, ಈ ಸಮಯದಲ್ಲಿ ಬೇರಿನ ರಚನೆ, ಬೇರಿನ ತೂಕ, ರೋಗ ನಿರೋಧಕಶಕ್ತಿ, ಕೀಟ ಬಾಧೆಗಳಿಗೆ ಸಹನಶಕ್ತಿಗಳನ್ನೂ ಸಹ ಇಳುವರಿಯೊಡನೆ ಪರಿಗಣಿಸಿರುವುದರಿಂದ ಈ ತಳಿಗಳು ಅಧಿಕ ಇಳುವರಿ ಕೊಡುವ ಜೊತೆಗೆ ಕಡಿಮೆ ನೀರಿಗೆ ಹೊಂದಿಕೊಳ್ಳುವುವು, ಉತ್ತಮ ರೋಗ ನಿರೋಧಕತೆ ಮತ್ತು ಕೀಟ ಬಾಧೆಯನ್ನು ತಾಳಿಕೊಳ್ಳುವ ಶಕ್ತಿಯನ್ನು ಹೊಂದಿವೆ ಎಂದು ದೃಡಪಟ್ಟಿರುತ್ತದೆ. ಇವುಗಳಲ್ಲಿ MAS-926 ಬಿಡುಗಡೆಯ ಹಂತದಲ್ಲಿದೆ. ಇದರೊಂದಿಗೆ ಕೃಷಿ ವಿಶ್ವವಿದ್ಯಾನಿಲಯವು ಶ್ರೀ ಪದ್ಧತಿಯ ಅಭಿವೃದ್ಧಿಗೆ ಶ್ರಮಿಸುತ್ತಿದೆ.

ಮೂಲ : (1). LEISA-India, Vol 8, No4,Dec 2006. (2). ಏರೋಬಿಕ್ ಭತ್ತ- ಅನುವಂಶೀಯ ಮತ್ತು ಸಸ್ಯ ತಳಿಶಾಸ್ತ್ರ ವಿಭಾಗ ಹಾಗೂ ವಿಸ್ತರಣ ಶಿಕ್ಷಣ ಘಟಕ, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು.

ಸಂಗ್ರಹ ಲೇಖನ : ವಿನಯ್ .ಬಿ.ಎಸ್.ಮತ್ತು ಶ್ರೀಕಂಠ ಪ್ರಸಾದ್.ಡಿ, ಸ್ನಾತಕೋತ್ತರ ವಿದ್ಯಾರ್ಥಿಗಳು, ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು.

Subscription Rates for *Honey Bee*

Category	South Asia* (Indian Rs.)	International (US $ Dollar)
Annual		
Individual	150	30
Supporter	500	50
Institution / Library	2,500	200
Life (15 Years)		
Individual	2,500	500
Institution / Library	10,000	1,000
Other Publications		
Spirit of Sustaninability	50	10
Nature Heals	150	20
Profiles of Innovators	175	25
Back issues of *Honey Bee*	**(1990-2003)**	
Hard Copies (Postage Extra)	1, 500 Individual	50
	5,000 Institution	200
CD	250 Individual	20
	1,000 Institution	60

** Includes : India, Nepal, Bhutan, Bangladesh, Pakistan, Sri Lanka and the Maldives.*

Please send your contributions through bank draft/cheque in favour of **A/c Sristi Innovations** at the editorial address; C/o Prof Anil K Gupta, Editor, *Honey Bee*, Indian Institute of Management, Vastrapur, Ahmedabad- 380 015 India. Phone : 91-79-26324927,
Email : honeybee@sristi.org;

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/–	ರೂ.400/–
ರೈತರು	ರೂ.60/–	ರೂ.500/–
ಇತರರು	ರೂ.75/–	ರೂ.600/–
ಸಂಸ್ಥೆಗಳು	ರೂ.350/–	ರೂ.2500/–
ಪೋಷಕರು	ರೂ.5000/– ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ ಪೋಷಕರ ವಂತಿಕೆ ಪಡೆಯಲಾಗುವುದು)

ಚಂದಾ ಹಣವನ್ನು ಅಂಚೆ (M.O.) ಅಥವಾ '*ಸಂಪಾದಕರು, ಹಿತ್ತಲಗಿಡ, ಬೆಂಗಳೂರು*' ಈ ಹೆಸರಿನ ಡ್ರಾಫ್ಟ್/ಚೆಕ್ ಮೂಲಕ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು.
ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

Printed by M/s Replica Offset Printers, Industrial Town, Rajajinagar, Bangalore - 560 044
Published by Smt. K. Meenakshi (Owner) at No.399, 14-B Cross, New Town Yelahanka, Bangalore-560 064,
Edited by Dr. T.N. Prakash Kammaradi

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ಆರನೆ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ **(Department of Science and Technology)** ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು **(Intellectual Property Rights)** ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪುರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 10,000 ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ವ್ಯಕ್ತಿ ಹಾಗು ಸಂಸ್ಥೆಗಳಿಗೆ 50,000, 25,000 ಮತ್ತು 10,000ಗಳ ಮೂರು ವಿಶೇಷ ಬಹುಮಾನಗಳಿವೆ. ಹಾಗೇ, ರಾಜ್ಯ ಮಟ್ಟದಲ್ಲೂ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿ ಪುಸ್ತಕ **(National Register)**ದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸ ಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿಮಾಡುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ. ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯೀಕರಣಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು **'ಪೂರ್ವ ಸೂಚಿತ ಸಮ್ಮತಿ'** *(Prior Informed Consent)* ಪಡೆದ ನಂತರವೇ ಮುಂದುವರೆಯಲಾಗುವುದು.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಿಕೊಡಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡುತ್ತಿದ್ದಾರೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ, ಫೋಟೋಗಳನ್ನು, ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ಆರನೆ ಸ್ಪರ್ಧೆಗೆ ಡಿಸೆಂಬರ್ 2008ರವರೆಗೆ ಅವಕಾಶವಿದೆ. ಅನುಶೋಧನೆಗಳನ್ನು 'ಹಿತ್ತಲಗಿಡ' ಅಥವಾ National Coordinator, National Innovation Foundation, Bungalow No.1 Satellite Complex, Permchand Nagar Road, Ahmedabad - 380015 Gujarat. e-mail : campaign@nifindia.org ಇಲ್ಲಿಗೆ ಕಳುಹಿಸಬಹುದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ತೆರೆದ ಅಂಚೆ

ಗೆ, ...

ವಿಳಾಸ
ಡಾ.ಟಿ. ಎಸ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು
ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065
Ph: 080-23620025
email: prakashtmk@yahoo.com